ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಏಪ್ರಿಲ್ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 7
ಪುಟ : 12
ಬೆಲೆ : ₹ 5/-




ಏಪ್ರಿಲ್ ೫

## ರಾಷ್ಟ್ರೀಯ ನಾವಿಕರ ದಿನ



ಅಂಬೇಡ್ಕರ್ ಜಯಂತಿ




ವಿಶ್ವ ಆರೋಗ್ಯ ದಿನ



ವಿಶ್ವ ಭೂಮಿ ದಿನ

A Journal of Karnataka State Secondary Teachers' Association

# ಸಂಪಾದಕೀಯ

ಇದು ಬಿರು ಬೇಸಗೆಯ ಕಾಲ. ಬಿಸಿಲಿನ ತಾಪ ಜೋರಾಗಿಯೇ ಇದೆ. ತಾಪದಿಂದ ಬಳಲಿ ಬೆಂಡಾದ ಶರೀರವನ್ನು ತಣಿಸಿಕೊಳ್ಳಲು ನಾನಾ ರೀತಿ ಪ್ರಯತ್ನಿಸುತ್ತೇವೆ. ಅದಕ್ಕಾಗಿಯೇ ಶ್ರೀರಾಮ ನವಮಿಯೂ ಈ ಕಾಲದಲ್ಲಿಯೇ ಬರುತ್ತದೆ. ಮರ್ಯಾದಾ ಪುರುಷೋತ್ತಮನಾದ ಶ್ರೀರಾಮನ ಜನ್ಮೋತ್ಸವವನ್ನು ನಾಡಿನ ಎಲ್ಲೆಡೆ ಶ್ರದ್ಧೆ, ಭಕ್ತಿ, ಸಂಭ್ರಮ, ಉತ್ಸಾಹಗಳಿಂದ ದೇವಾಲಯಗಳಲ್ಲಿ, ಮನೆಗಳಲ್ಲಿ ನಾವೆಲ್ಲರೂ ಆಚರಿಸುತ್ತೇವೆ. ಪಾನಕ, ಮಜ್ಜಿಗೆಯ ಪ್ರಸಾದ ಸ್ವೀಕರಿಸಿ ದೇಹವನ್ನು ತಂಪು ಮಾಡಿಕೊಳ್ಳುತ್ತೇವೆ. "ರಾಮನಾಮ ಪಾಯಸಕೆ ಕೃಷ್ಣ ನಾಮವೆಂಬೊ ಸಕ್ಕರೆಯ ಬೆರೆಸಿ ಬಾಯಿ ಚಪ್ಪರಿಸಿರೊ" ಎಂಬಂತೆ ರಾಮೋತ್ಸವದ ಸಲುವಾಗಿ ನಡೆಯುವ ಸಂಕೀರ್ತನೆ, ಸಂಗೀತದ ರಸದೌತಣ ಕಾರ್ಯಕ್ರಮಗಳನ್ನು ಆಸ್ವಾದಿಸಿ ಮನಸ್ಸನ್ನು ತೃಪ್ತಿಪಡಿಸಲು ಪ್ರಯತ್ನ ಪಡುತ್ತೇವೆ. ಆ ಮೂಲಕ ಜನ್ಮದ ಸಾರ್ಥಕತೆ ಯಾಗಬಹುದೆಂಬ ಆಶಯ ನಮ್ಮದು.

ಆಧುನಿಕ ಭಾರತದ ಶಿಲ್ಪಿಗಳಲ್ಲಿ ಡಾ|| ಅಂಬೇಡ್ಕರ್ ಅವರು ಪ್ರಮುಖರು. ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸುವಲ್ಲಿ ಡಾ|| ಅಂಬೇಡ್ಕರರು ಪ್ರಮುಖ ಪಾತ್ರವನ್ನು ವಹಿಸಿದರು. ಸಮಾಜ ಸುಧಾರಣೆಯಲ್ಲಿಯೂ ಅವರ ಸಾಧನೆ ಗಣನೀಯವಾದುದು. ಅವರ ವಿಚಾರಧಾರೆಗಳು ಆದರಣೀಯ ಹಾಗೂ ಅನುಸರಣೀಯ. ಡಾ|| ಅಂಬೇಡ್ಕರರ ಜನ್ಮೋತ್ಸವದ ಈ ಸಂದರ್ಭದಲ್ಲಿ ಅವರ ವಿಚಾರಗಳನ್ನು ಸ್ಮರಿಸಿ ಅಳವಡಿಸಿ ಕೊಳ್ಳುವುದು ಅವಶ್ಯ.

ಭಾರತವು ಹಲವಾರು ಧರ್ಮಗಳಿಗೆ ನೆಲೆಕೊಟ್ಟ ನಾಡು. ಕ್ರಿ.ಪೂ. 500ರ ಸುಮಾರಿನಲ್ಲಿ ಜೈನ, ಮತ್ತು ಬೌದ್ಧ ಧರ್ಮಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆಗ ದಾರಿದೀಪಗಳಾಗಿದ್ದವರು ಮಹಾವೀರ ಮತ್ತು ಭಗವಾನ್ ಬುದ್ಧ. ಜೈನ ಧರ್ಮದ ಸ್ಥಾಪಕ ಜಿನ, ಅರ್ಥಾತ್ ಮಹಾವೀರರ ಜಯಂತಿ ಯನ್ನು ಈಗಷ್ಟೇ ಆಚರಿಸಲಾಗಿದೆ. ಸತ್ಯ, ಅಹಿಂಸೆ, ಆಸ್ತೇಯಗಳನ್ನು ಪಾಲಿಸುವಂತೆ ಬೋಧಿಸಿದ ಮಹಾವೀರರ ಬೋಧನೆಗಳು ಸಾರ್ವಕಾಲಿಕ. ಈ ಬೋಧನೆಗಳು ನಮ್ಮ ಮನಸ್ಸಿನಲ್ಲಿ ಯಾವಾಗಲೂ ನೆಲೆಸಿ ಸತ್ಯ, ಅಹಿಂಸೆಗಳನ್ನು ಆಚರಿಸಲು ಸಾಧ್ಯವಾದಷ್ಟು ಪ್ರಯತ್ನಿಸುವುದು ಇಂದಿನ ಅಗತ್ಯ.

ಭಾರತದಲ್ಲಿ ಅನೇಕ ಮಹನೀಯರುಗಳು ಕಾಲಕಾಲಕ್ಕೆ ಅವತರಿಸಿ ಜನರಿಗೆ ಮಾರ್ಗದರ್ಶನ ನೀಡಿ ಸಮಾಜಕ್ಕೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಅವರಲ್ಲಿ ಸಿಖ್ಖರ ಗುರು ತೇಜ್ ಬಹದ್ದೂರ್ ಹಾಗೂ ಕನ್ನಡದ ವಚನಕಾರರಲ್ಲಿ ಪ್ರಮುಖರಾದ ದೇವರ ದಾಸಿಮಯ್ಯ ಸ್ಮರಣೀಯರು.

ಏಪ್ರಿಲ್ 7ನೇ ತಾರೀಖು 'ವಿಶ್ವ ಆರೋಗ್ಯ ದಿನ'. 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿ ಪರಂಪರಾಗತವಾಗಿದ್ದು ಆರೋಗ್ಯದ ಮಹತ್ವವನ್ನು ಹೇಳುತ್ತದೆ. ಆದರೆ ಸ್ವಾರ್ಥ, ಲಾಭ ಮನೋಭಾವವೇ ಹೆಚ್ಚಾಗಿರುವ ಸಮಾಜದಲ್ಲಿ ಔಷಧಗಳ ತಯಾರಿಕೆಯಲ್ಲೂ ಮೋಸ ಮಾಡುವುದನ್ನು ಕಾಣುತ್ತಿದ್ದೇವೆ. ರೋಗಿಗಳ ಜೊತೆ ಚೆಲ್ಲಾಟವಾಡುವ ನೀಚತನವನ್ನು ನೋಡುತ್ತಿದ್ದೇವೆ. ಈ ಮನೋಭಾವ ಹೋಗಿ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರು ಪ್ರಾಮಾಣಿಕ ರಾಗುವಂತಾಗಲಿ ಎಂದು ಆಶಿಸೋಣ.

ಏಪ್ರಿಲ್ 22 ರಂದು 'ವಿಶ್ವ ಭೂಮಿ ದಿನ'ವನ್ನು ಆಚರಿಸಲಾಗುತ್ತದೆ. ಭೂಮಿಯ ಸದ್ಬಳಕೆಯ ಕಡೆ ಜನರ ಮನಸ್ಸನ್ನು ಸೆಳೆಯುವ ಪ್ರಯತ್ನ ಇದು. ನಾವು ಭೂಮಿಯನ್ನು ಲಾಭಕ್ಕಾಗೇ ಬಳಸುವ ಬಗ್ಗೆ ಯೋಚಿಸುತ್ತೇವೆ. ಆದರೆ ನಮ್ಮ ಒಳಿತಿಗಾಗಿಯೇ ಭೂಮಿಯ ದುರ್ಬಳಕೆ ಆಗಬಾರದಲ್ಲವೇ? ಇನ್ನು ಮುಂದಾದರೂ ಭೂಮಿಯ ಸದ್ಬಳಕೆಯ ಕಡೆ ಜನರು ಗಮನ ಹರಿಸುವಂತಾದರೆ ಎಷ್ಟು ಚೆನ್ನ.

ಇದು ನಮ್ಮ ಸೈನಿಕರನ್ನು ನೆನೆದು ಗೌರವಿಸುವ ಸಮಯವೂ ಹೌದು. ಏಪ್ರಿಲ್ 5 ರಾಷ್ಟ್ರೀಯ ನಾವಿಕರ ದಿನ. ನೌಕಾ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಮಿತ್ರರಿಗೆ ಈ ಮೂಲಕ ನಮ್ಮ ಶುಭ ಕಾಮನೆಗಳು, ನಮನಗಳು.

ಸಂಪಾದಕ

# ಪರಿವಿಡಿ


| | |
|---|---|
| ಶಾಶ್ವತ ಮೌಲ್ಯಗಳ ಆಕರ ಶ್ರೀರಾಮ ಚರಿತೆ | 3 |
| ಅಂಬೇಡ್ಕರ್ ಮತ್ತು ಸಾಧನೆ | 5 |
| ಸ್ತ್ರೀ ರತ್ನ, ಕಿತ್ತೂರು ಚೆನ್ನಮ್ಮ | 6 |
| ಶೈಕ್ಷಣಿಕ ಸಂವಾದ | 7 |
| ದೇವರ ದಾಸಿಮಯ್ಯ | 8 |
| ವಿದ್ಯಾರ್ಥಿ ಮಿತ್ರ – 6 | 10 |

# ಶಾಶ್ವತ ಮೌಲ್ಯಗಳ ಆಕರ ಶ್ರೀರಾಮ ಚರಿತೆ



ಭಾರತೀಯ ಸಂಸ್ಕೃತಿ ಎಂದರೇನು? ಈ ಪ್ರಶ್ನೆಗೆ ಒಂದೇ ಶಬ್ದದಲ್ಲಿ ಉತ್ತರಿಸಿ ಎಂದು ರಸಪ್ರಶ್ನೆ ಕೇಳಿದರೆ ಯಾರಿಗಾದರೂ ಉತ್ತರಿಸಲು ಸಾಧ್ಯವೇ? ಸಾಧ್ಯವಿದೆ. ಆ ಒಂದು ಶಬ್ದ ಎಂದರೆ 'ರಾಮಾಯಣ'. ಮರ್ಯಾದಾಪುರುಷೋತ್ತಮ ಶ್ರೀರಾಮಚಂದ್ರ ಭಾರತೀಯಸಂಸ್ಕೃತಿ, ಸಭ್ಯತೆ, ಜೀವನ ಮೌಲ್ಯಗಳ ಸಾಕಾರರೂಪ.

ವೈಯುಕ್ತಿವಾಗಿ ಶ್ರೀರಾಮ ಗುಣವಂತ, ವೀರ್ಯವಂತ, ಧೀರ, ಮಹಾನ್‌ಪರಾಕ್ರಮಿ, ಶೀಲವಂತ, ಸತ್ಯನಿಷ್ಠ, ಧರ್ಮಜ್ಞ, ವಿದ್ವಾಂಸ, ಸರ್ವಪ್ರಾಣಿ ಹಿತಾಸಕ್ತ. ಹೀಗೆ ಅವನು ಅನಂತ ಗುಣಗಳ ಗಣಿ.

ಇಂಥ ಮಾನವ ಜೀವನದ ಗುಣಗಳ ಪರಾಕಾಷ್ಠೆ ಶ್ರೀರಾಮಚಂದ್ರನ ಜೀವನಮೌಲ್ಯಗಳನ್ನು ಸಮಗ್ರವಾಗಿ ತಿಳಿಸುವ ಕಾವ್ಯ ವಾಲ್ಮೀಕಿ ವಿರಚಿತ ರಾಮಾಯಣ.

ರಾಮಾಯಣದಲ್ಲಿ ಬರುವ ಅನೇಕ ಪಾತ್ರಗಳ ಮೂಲಕ ಜೀವನದ ಶಾಶ್ವತ ಮೌಲ್ಯಗಳಾದ, ಧರ್ಮ, ಅರ್ಥ, ಕಾಮಗಳನ್ನು ಕವಿ ವಾಲ್ಮೀಕಿ ಅರ್ಥೈಸಿದ್ದಾನೆ. ಈ ಮೌಲ್ಯಗಳು ವಿಶ್ವಮೌಲ್ಯಗಳು (Universal values). ತಪ್ತ ಗೊಂಡಿರುವ ಇಂದಿನ ಜಗತ್ತಿಗೆ ಶಾಂತಿಯನ್ನು ನೀಡಬಲ್ಲ ಶಕ್ತಿ ಇರುವುದು ಈ ಮೌಲ್ಯಗಳಿಗೆ ಮಾತ್ರ. ಧರ್ಮ– ಇದೊಂದು ಅತ್ಯಂತ ಪ್ರಧಾನವಾದ ಶಾಶ್ವತ ಮೌಲ್ಯ. ಇದು ಮಿಕ್ಕೆಲ್ಲ ಮೌಲ್ಯಗಳ ಆತ್ಮ. 'ಧರ್ಮವನ್ನು ಕಾಪಾಡುವವನನ್ನು ಧರ್ಮವು ಕಾಪಾಡುತ್ತದೆ' ಎನ್ನುತ್ತದೆ ವೇದೋಕ್ತಿ. ಪಿತೃವಾಕ್ಯ ಪರಿಪಾಲನೆ ಪುತ್ರಧರ್ಮ. ಅದಕ್ಕಾಗಿ ರಾಮ ತನ್ನೆಲ್ಲ ಸುಖ ಸಂತೋಷಗಳನ್ನು ತ್ಯಜಿಸಿ ಕಾಡಿಗೆ ಹೊರಟುನಿಂತ. ತಾಯಿ ಕೌಸಲ್ಯೆಯ ಪಾದಕ್ಕೆರಗಿದಾಗ ತಾಯಿ ಹೇಳಿದ ಮಾತು ಅರ್ಥಪೂರ್ಣ. 'ಯಾವ ಧರ್ಮವನ್ನು ನೀನು ದೃಢಮನಸ್ಸಿನಿಂದ ಪಾಲಿಸುತ್ತಿದ್ದೀಯೋ ಅದು ನಿನ್ನನ್ನು ಸದಾ ಕಾಪಾಡಲಿ'.

ಇನ್ನು ಭರತ ಅಯೋಧ್ಯೆಗೆ ಹಿಂದಿರುಗಿ ರಾಮನ ವನವಾಸದ ಸುದ್ದಿ ಅರಿತ ನಂತರ ತಾಯಿ ಕೈಕೇಯಿಗೆ ಹೇಳುವ ಮಾತು 'ಜೇಷ್ಠ ಪುತ್ರನಿರುವಾಗ ಕನಿಷ್ಠನು ರಾಜನಾಗುವಂತಿಲ್ಲ. ಇದು ಶಾಶ್ವತ ಧರ್ಮ'.

ಸಿಂಹಾಸನವು ಸುಲಭವಾಗಿ ಸಿಗುವಂತಿದ್ದರೂ ಧರ್ಮಪಾಲನೆಯ ವ್ರತಧಾರಿಗಳಾದ ರಾಮ, ಭರತರಿಬ್ಬರಿಗೂ ಅದು ಬೇಡವಾಗಿತ್ತು. ಇದು ಧರ್ಮ ಪಾಲನೆ.

ಅರ್ಥ, ಕಾಮಗಳೂ ಧರ್ಮವನ್ನು ಆಧರಿಸಿಕೊಂಡಿರುವರೆಗೆ ಅಪೇಕ್ಷಿತ ಮೌಲ್ಯಗಳೇ. ಆದರೆ ಧರ್ಮ ಮಾರ್ಗದಿಂದ ಜಾರಿದ ಅರ್ಥ ಕಾಮಗಳು ವಿನಾಶಕ್ಕೆ ದಾರಿಯಾಗುತ್ತವೆ. ರಾಮಾಯಣದಲ್ಲಿ ಇದನ್ನು ಬಹಳ ಚೆನ್ನಾಗಿ ವಿವರಿಸಲ್ಪಟ್ಟಿವೆ.

ಇಡೀ ರಾಮಾಯಣ ಕಥೆಯು ಚಲಿಸುವುದು ಮಂಥರೆ ಮತ್ತು ಶೂರ್ಪನಖಿ ಎಂಬ ಎರಡು ಸ್ತ್ರೀ ಚಕ್ರಗಳ ಮೇಲೆ. ಇಲ್ಲಿ ಮಂಥರೆ ಮತ್ತು ಶೂರ್ಪನಖಿಯರು ಅರ್ಥಕಾಮಗಳ ಪ್ರತಿರೂಪ. ಮಂಥರೆಗೆ ರಾಜ್ಯದ ಆಸೆ; ಶೂರ್ಪನಖಿಗೆ ಸುಂದರಾಂಗನಾದ ಶ್ರೀರಾಮನನ್ನು ಕೂಡುವ ಆಸೆ. ಮಂಥರೆ, ಭರತನನ್ನು ರಾಜನನ್ನಾಗಿಸುವ ಆಸೆಪಟ್ಟಳು. ಆದರೆ ಸ್ವತಃ ಭರತನೇ ಅದು ಅಧರ್ಮವೆಂದು ಜರಿದ. ಶೂರ್ಪನಖಿ ಏಕಪತ್ನೀ ವ್ರತಸ್ಥನಾದ ರಾಮನನ್ನು ಇಚ್ಛಿಸಿದಳು. ರಾಮ ಅದು ಅಧರ್ಮವೆಂದು ಹೇಳಿದರೂ ಕೇಳಲಿಲ್ಲ. ಪರಿಣಾಮ ರಾಮಾಯಣ ಯುದ್ಧ.

ಸುಭಾಷಿತವೊಂದು 'ಸರ್ವೇಷಾಮೇವ ಶೌಚಾನಾಂ ಅರ್ಥಶೌಚಂ ಪ್ರಶಸ್ಯತೇ' ಎನ್ನುತ್ತದೆ. ಎಲ್ಲ ಶುಚಿತ್ವಕಿಂತಲೂ ಅರ್ಥಶುಚಿತ್ವ (ಹಣವನ್ನು ಧರ್ಮಮಾರ್ಗದಲ್ಲಿ ಸಂಪಾದಿಸುವುದು ಮತ್ತು ದಾನಮಾಡುವುದು) ಬಹಳ ಮುಖ್ಯ. ರಾಮ ಕಾಡಿಗೆ ಹೊರಡುವ ಮುನ್ನ ತನ್ನ ಕೋಶಾಧಿಕಾರಿಯನ್ನು ಕರೆದು ತನ್ನದಾದ ಹಣವನ್ನು ಬಡ ಬಗ್ಗರಿಗೆ ದಾನಕೊಡುವಂತೆ ಹೇಳುತ್ತಾನೆ.

ಭರತನಾದರೋ, ಹದಿನಾಲ್ಕು ವರ್ಷ ತಪಸ್ವಿಯ ಜೀವನ ನಡೆಸುತ್ತ, ರಾಮ ವನವಾಸದಿಂದ ಹಿಂದಿರುಗಿದಾಗ 'ಅಣ್ಣಾ ನಿನ್ನ ಅನುಗ್ರಹದಿಂದ ನಾನು ರಾಜ್ಯ ರಕ್ಷಿಸಿದೆ. ನಿನ್ನ ಅನುಪಸ್ಥಿತಿಯಲ್ಲಿ ರಾಜ್ಯಕೋಶಗಳು ಹತ್ತುಪಟ್ಟು ಬೆಳೆದಿದೆ. ಇಂದೇ ನಿನ್ನ ರಾಜ್ಯವನ್ನು ಹಿಂತೆಗೆದುಕೊಂಡು ನನ್ನನ್ನು ಭಾರ

ಪುಟ 4 ಕ್ಕೆ ➤

➢ ಪುಟ 3 ರಿಂದ..... ಶ್ರೀರಾಮ ಚರಿತ

ಮುಕ್ತನಾಗಿಸು' ಎನ್ನುತ್ತಾನೆ. ಇಲ್ಲಿ ವಾಲ್ಮೀಕಿ ರಾಮ ಭರತರ ಮೂಲಕ ವೈಯುಕ್ತಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳ ಪ್ರತಿಪಾದನೆ ಮಾಡಿದ್ದಾನೆ.

'ಆತ್ಮಸಂಯಮ' ಎಂಬುವುದು ವೈಯುಕ್ತಿಕ ಮೌಲ್ಯವೂ ಹೌದು. ಕೌಟುಂಬಿಕ ಮೌಲ್ಯವೂ ಹೌದು. ವಿಶೇಷಾರ್ಥದಲ್ಲಿ ಸಾಮಾಜಿಕ ಮೌಲ್ಯವೂ ಹೌದು. ಸಂಯಮ ಜಾರಿದರೆ ಎಂಥ ಅನಾಹುತವಾಗುತ್ತದೆ ಎಂಬುದು ರಾಮಾಯಣದ ಹಲವು ಪಾತ್ರಗಳ ಮೂಲಕ ನಮಗೆ ತಿಳಿದು ಬರುತ್ತದೆ.

ಸಂಯಮವಿಲ್ಲದೆ ಕಾಮವನ್ನು ಹರಿಯಬಿಟ್ಟದ್ದರಿಂದ ಶೂರ್ಪನಖಿ ರಾಕ್ಷಸ ಕುಲನಾಶಿನಿಯಾದಳು. ತಮ್ಮನ ಹೆಂಡತಿ ತಾರೆಯನ್ನು ಕಾಮಿಸಿ ವಾಲಿ ಪ್ರಾಣವನ್ನು ಕಳೆದುಕೊಂಡನು. ಅಹಲ್ಯೆ ಇಂದ್ರನನ್ನು ಬಯಸಿ ಶಾಪಗ್ರಸ್ತೆಯಾದಳು.

ಕಾಮಕ್ರೋಧಗಳು ಒಂದೇ ನಾಣ್ಯದ ಎರಡು ಮುಖಗಳು. ಕಾಮಕ್ರೋಧಗಳಿಗೆ ಒಳಗಾದ ರಾವಣನಿಗೆ ಮಾರೀಚನ ಬುದ್ಧಿವಾದ ಹಿಡಿಸಲಿಲ್ಲ. ಕಾರಣ ಶೂರ್ಪನಖಿಯ ಕ್ರೋಧ ರಾವಣನನ್ನು ಅಂಧನನ್ನಾಗಿಸಿ, ಸೀತಾಪಹರಣಕ್ಕೆ ಪ್ರೇರೇಪಿಸಿತ್ತು. ಮಾಯಾ ಜಿಂಕೆಯ ರೂಪಿ ಮಾರೀಚ ರಾಮಬಾಣಕ್ಕೆ ಹತನಾಗುವಾಗ 'ಹೇ ರಾಮ, ಹೇ ಲಕ್ಷ್ಮಣಾ' ಎಂದು ಕೂಗಿದ. ಅದು ರಾಕ್ಷಸರ ಮಾಯೆ ಎಂದು ಎಷ್ಟು ಕೇಳಿದರೂ ಕೇಳದ ಸೀತೆ ಕೋಪದಿಂದ 'ಲಕ್ಷ್ಮಣಾ ನನ್ನ ಮಾತನ್ನು ನೀನು ಉಲ್ಲಂಘಿಸುತ್ತಿರುವೆ' ಎಂದು ಕುಟುಕಿದ್ದು ಮುಂದಿನ ಅನಾಹುತಕ್ಕೆ ಕಾರಣವಾಯಿತು.

ಹೀಗೆ ಕೋಪದ ಕೈಗೆ ಮನಸ್ಸನ್ನು ಕೊಟ್ಟರೆ ಮನುಷ್ಯನಿಗೆ ಅನರ್ಥಗಳೇ ಆಗುತ್ತವೆ ಎಂಬುದನ್ನು ಈ ಪಾತ್ರಗಳು ನಮಗೆ ತಿಳಿಸುತ್ತವೆ.

ಅದೇ ಚಾರಿತ್ರ್ಯಶುದ್ಧಿಯಿಂದ ನಿರ್ಮಲ ಮನಸ್ಸನ್ನು ಹೊಂದಿದ್ದರೆ, ಮನುಷ್ಯ ವಿಚಲಿತನಾಗುವುದಿಲ್ಲ ಎಂಬುದನ್ನು ವಾಲ್ಮೀಕಿ ಹನುಮಂತನ ಮೂಲಕ ನಿರೂಪಿಸಿದ್ದಾನೆ. ವಿಧಿಯಿಲ್ಲದೆ ರಾವಣನ ಅಂತಃಪುರವನ್ನು ಹೊಕ್ಕ ಹನುಮಂತನಿಗೆ, ಅಲ್ಲಿ ಅಸ್ತವ್ಯಸ್ತವಾಗಿ ಮಲಗಿದ್ದ ಸುಂದರಿಯನ್ನು ಕಂಡರೂ ಮನಸ್ಸು ಚಂಚಲವಾಗಲಿಲ್ಲ. ಒಂದು ಕ್ಷಣ ತನ್ನಿಂದ ಅಧರ್ಮವಾಯಿತೇನೋ ಎಂದೆನಿಸಿದರೂ, ತನ್ನಿಂದ ಧರ್ಮಕ್ಕೆ ಕಿಂಚಿತ್ತೂ ಕುಂದು ಬಂದಿಲ್ಲ ಎಂದು ಸಮಾಧಾನ ಪಡುತ್ತಾನೆ.

## ಗುರುಭಕ್ತಿ

ಗುರು ಹಿರಿಯರನ್ನು ಆದರಿಸುವುದು. ಅದರಲ್ಲಿ ಭಕ್ತಿ ಇರಿಸುವುದು ನಮ್ಮ ಸಂಸ್ಕೃತಿಯ ವಿಶೇಷ. ಅದರಲ್ಲೂ 'ಆಚಾರ್ಯದೇವೋಭವ' ಎಂದು ಗುರುವನ್ನು ದೈವತ್ವಕ್ಕೇರಿಸಿದ್ದು ನಮ್ಮ ಸಭ್ಯತೆ. ಶ್ರೀರಾಮ ತನ್ನ ಗುರುಭಕ್ತಿಯ ಮೆರೆದ ಪರಿ ಇಲ್ಲಿದೆ. ಗುರು ವಿಶ್ವಾಮಿತ್ರರು ತಮ್ಮೊಂದಿಗೆ ಬಂದ ರಾಮಲಕ್ಷ್ಮಣರಿಗೆ ಶ್ರಸ್ತ್ರಾಸ್ತ್ರಗಳ ಪರಿಚಯ ಮಾಡಿಕೊಟ್ಟು 'ಬಲ–ಅತಿಬಲ' ಎಂಬ ಮಂತ್ರವನ್ನು ಬೋಧಿಸುತ್ತಾರೆ. ದಾರಿಯಲ್ಲಿ ಎದುರಾದ ತಾಟಕಿಯೆಂಬ ರಾಕ್ಷಸಿಯನ್ನು ಕೊಲ್ಲಲು ಹೇಳಿದಾಗ, ರಾಮನ ಮನಸ್ಸಿನಲ್ಲಿ ಸ್ತ್ರೀ ಹತ್ಯೆ ಪಾಪವಲ್ಲವೇ? ಎಂಬ ಜಿಜ್ಞಾಸೆ ಮೂಡಿದರೂ ಗುರುವಾಜ್ಞೆಯಂತೆ ತಾಟಕಿಯನ್ನು ಕೊಲ್ಲುತ್ತಾನೆ. ನಂತರ ರಾಮನ ಮನಸ್ಸನ್ನು ಅರಿತ ವಿಶ್ವಾಮಿತ್ರರು ಅಧರ್ಮಕ್ಕೆ ಅನುಗುಣವಾಗಿ ನಡೆಯುವವರು ಸ್ತ್ರೀಯಾಗಲೀ ಬ್ರಾಹ್ಮಣನಾಗಲಿ ಅವರನ್ನು ವಧಿಸುವುದು ಧರ್ಮಪಾಲನೆ ಎಂದು ತಿಳಿಸುತ್ತಾರೆ. ಜನಕನ ಆಸ್ಥಾನದಲ್ಲೂ ರಾಮ ಬಿಲ್ಲನ್ನು ಗುರುವಿನ ಆಜ್ಞೆಯಂತೆ ಮುರಿಯಲು ಎದ್ದಾಗ ಎಲ್ಲ ಗುರು ಹಿರಿಯರಿಗೂ ನಮಸ್ಕರಿಸಿಯೇ ಮುಂದಡಿ ಇಡುತ್ತಾನೆ.

## ಅತಿಥಿಸತ್ಕಾರ

ಮನೆಗೆ ಕರೆಸಿಕೊಳ್ಳದೇ ಬರುವವನೇ ಅತಿಥಿ. ಅತಿಥಿಯನ್ನು ದೈವತ್ವಕ್ಕೇರಿಸಿ 'ಅತಿಥಿ ದೇವೋಭವ' ಎಂದ ಸಂಸ್ಕೃತಿಯೂ ನಮ್ಮದು. ರಾಮಾಯಣದಲ್ಲಿ ಹೆಜ್ಜೆ ಹೆಜ್ಜೆಗೂ ಈ ಮೌಲ್ಯವನ್ನು ಕಾಣುತ್ತೇವೆ.

ವಿಶ್ವಾಮಿತ್ರ, ದಶರಥನ ಆಸ್ಥಾನಕ್ಕೆ ಬಂದ ಅತಿಥಿ. ಅವನಿಗೆ ಸಕಲ ಸತ್ಕಾರವನ್ನು ಮಾಡಿದ ನಂತರ, ವಿಶ್ವಾಮಿತ್ರ ದಶರಥನಿಗೆ ಯಾಗರಕ್ಷಣೆಗೆ ರಾಮಲಕ್ಷ್ಮಣರನ್ನು ಕಳಿಸಲು ಹೇಳುತ್ತಾನೆ. ಕ್ಷಣಕಾಲ ದಶರಥ ಗೊಂದಲಕ್ಕೊಳಗಾದರೂ ಅತಿಥಿಯ ಮನನೋಯಿಸಬಾರದೆಂಬ ವಸಿಷ್ಠರ ಮಾತಿನಂತೆ ತನ್ನ ಮಕ್ಕಳನ್ನು ವಿಶ್ವಾಮಿತ್ರರೊಂದಿಗೆ ಕಳಿಸುತ್ತಾನೆ. ಕಾಡಿಗೆ ಹೊರಟ ರಾಮಲಕ್ಷ್ಮಣ ಸೀತೆಯರನ್ನು ಗಂಗಾನದಿ ದಾಟಿಸುವಾಗ, ಅಂಬಿಗ ಗುಹ ಸತ್ಕರಿಸುವುದು, ಶಬರಿ ರಾಮನಿಗಾಗಿ ಪರಿತಪಿಸಿ, ರಾಮಬಂದಾಗ ಶ್ರೇಷ್ಠವಾದ ಹಣ್ಣುಗಳನ್ನು ನೀಡಬೇಕೆಂದು ಎಂಜಲು ಹಣ್ಣು ನೀಡುವುದು ಅವರ ಭಕ್ತಿಯನ್ನಷ್ಟೇ ಅಲ್ಲ ಅತಿಥಿ ಸತ್ಕಾರದಲ್ಲಿನ ಆಸೆಯನ್ನೂ ಎತ್ತಿತೋರಿಸುತ್ತದೆ.

## ಪ್ರಜಾಪ್ರಭುತ್ವ

ಇಂದಿನ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರಭುತ್ವ ಓಟು ಕೊಡುವ ಒಂದು ದಿನಕ್ಕೆ ಮಾತ್ರ ಸೀಮಿತ. ಅದರ ನಂತರ ನಾಯಕರದ್ದೇ ಪ್ರಭುತ್ವ. ಆದರೆ ರಾಮ ರಾಜ್ಯವಾದರೋ ಅಕ್ಷರಶಃ ಪ್ರಜಾಪ್ರಭುತ್ವವೇ. ರಾಮ ಕಾಡಿಗೆ ಹೊರಟಾಗ ಎಲ್ಲ ಪ್ರಜೆಗಳೂ ಹೋಗಬಾರದೆಂದು ಕಾಡಿಬೇಡಿದರೂ ಕಾಡಿಗೆ ಹೊರಡಲು

ಪುಟ 9 ಕ್ಕೆ ➢

# ಅಂಬೇಡ್ಕರ್ ಮತ್ತು ಸಾಧನೆ



ಪ್ರಕಾಶಮಾನವಾದ ವಿದ್ಯಾರ್ಥಿಯ ನೋಟವು ಸರ್ಕಾರಿ ಆಂಗ್ಲ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದ ಅಂಬೇಡ್ಕರರನ್ನು ಆಕರ್ಷಿಸಿತು, ಹಾಗೂ ಇದೇ ಸಂದರ್ಭದಲ್ಲಿ ಅಧ್ಯಾಪಕರ ಪರಿಶುದ್ಧ ಮನೋಭಾವವು ಭೀಮರಾವರನ್ನು ಅತಿಯಾಗಿ ಸೆಳೆಯಿತು. ಇದರಿಂದಾಗಿ ಭೀಮರಾವ ಅಂಬೇಡ್ಕರರಾಗಿ ಬದಲಾದರು. ಮುಂದೆ ಲಂಡನ್ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ತನ್ನ ವಿದ್ಯಾರ್ಥಿಯನ್ನು ಹಾರೈಸಿ ಅಧ್ಯಾಪಕ ಅಂಬೇಡ್ಕರ್ ಪತ್ರ ಬರೆದಿದ್ದರು. 1927 ರಲ್ಲಿ ಅಂಬೇಡ್ಕರ್ ತನ್ನ ಗುರುಗಳನ್ನು ಗೌರವಿಸಿದುದು ಗುರು ಶಿಷ್ಯರ ಸಂಬಂಧದ ಕುರುವಾಗಿತ್ತು.

1891ರಲ್ಲಿ ಏಪ್ರಿಲ್ 14ರಂದು ರಾಮ್‌ಜಿ ಸಕ್ಪಾಲ್ ಮತ್ತು ಭೀಮಾಭಾಯಿ ಸಕ್ಪಾಲ್‌ರಿಗೆ ಜನಿಸಿದ ಗಂಡುಮಗುವೇ ಭೀಮರಾವ್. ಭೀಮರಾವರ ತಂದೆ ಮತ್ತು ತಾತ ಬ್ರಿಟೀಷ ಸೈನ್ಯದಲ್ಲಿ ಉದ್ಯೋಗದಲ್ಲಿದ್ದರು. ಮಧ್ಯಪ್ರದೇಶದ "ಮಹೌ" ಗ್ರಾಮದಿಂದ ಭೀಮರಾವ ಮೂರನೇ ವಯಸ್ಸಿನಲ್ಲಿ ಮಹಾರಾಷ್ಟ್ರದ ಸತಾರಾಕ್ಕೆ ವಲಸೆ ಬಂದರು. ಆಕರ್ಷಕ ವ್ಯಕ್ತಿತ್ವದ ಅಂಬೇಡ್ಕರ್ ಅಸ್ಪೃಶ್ಯತೆಯ ಹಿಂಸೆಗಳ ಮಧ್ಯದಲ್ಲೂ 1907ರಲ್ಲಿ ಮೆಟ್ರಿಕ್ಯುಲೇಷನಲ್ಲಿ ಉತ್ತಮ ಅಂಕ ಪಡೆದು ಪಾಸಾದರು. 1912ರಲ್ಲಿ ರಾಜನೀತಿಶಾಸ್ತ್ರದಲ್ಲಿ ಪದವಿ ಪಡೆದರು. 1913ರಲ್ಲಿ ತಂದೆಯನ್ನು ಕಳೆದುಕೊಂಡರು. ಮುಂದೆ ಬರೋಡ ಮಹಾರಾಜರ ವಿದ್ಯಾರ್ಥಿ ವೇತನ ದೊರೆತು ಅಮೇರಿಕದಲ್ಲಿ "Natural Dividend of India – A Historical and Analytical study" ಎನ್ನುವ ವಿಷಯದ ಮಹಾ ಪ್ರಬಂಧಕ್ಕೆ ಕೊಲಂಬಿಯಾ ವಿಶ್ವವಿದ್ಯಾಲಯದಿಂದ 1917ರಲ್ಲಿ ಡಾಕ್ಟರೇಟ್ ಪಡೆದರು. ಕೊಲ್ಹಾಪುರದ ಸಾಹು ಮಹಾರಾಜರ ಸಹಕಾರದಿಂದ 1920ರಲ್ಲಿ ಲಂಡನ್ನಿಗೆ ಬಂದು ಎಂ.ಎಸ್ಸಿ ಸ್ನಾತಕೋತ್ತರ ಪದವಿ ಪಡೆದರು ಮತ್ತು 1923ರಲ್ಲಿ ಡಿ.ಎಸ್ಸಿ ಪದವಿಯನ್ನು ಲಂಡನ್ ಕಾಲೇಜಿನಿಂದ ಪಡೆದರು.

ಅಂಬೇಡ್ಕರ್‌ವರು 1920ರ ಜನವರಿ 30ರಂದು ಅಸ್ಪೃಶ್ಯತೆಯನ್ನು ವಿರೋಧಿಸಿ "ಮೂಕ್ ನಾಯಕ್" ಎನ್ನುವ ದ್ವಿವಾರ ಪತ್ರಿಕೆ ಪ್ರಾರಂಭಿಸಿದರು. 1924ರ ನಂತರ "ಬಹಿಷ್ಕೃತ ಹಿತಕಾರಿಣಿಸಭಾ" ಎನ್ನುವ ಸಂಸ್ಥೆಯನ್ನು ಕಟ್ಟಿ ಜಾತಿ ಭೇಧವನ್ನು ದೂರ ಮಾಡುವ ಉದ್ದೇಶವನ್ನು ಹೊಂದಿದ್ದರು. ಇದೇ ಸಂದರ್ಭದಲ್ಲಿ ಅಸ್ಪೃಶ್ಯತೆಯಿಂದ ಬಾಧಿಸಲ್ಪಟ್ಟ ಜನರೆಲ್ಲರು ಅಂಬೇಡ್ಕರರನ್ನು ತಮ್ಮ ತಂದೆಗೆ ಸಮಾನವಾಗಿ ಕಂಡರು. ಅದಕ್ಕಾಗಿ "ಬಾಬಾ ಸಾಹೇಬ್" ಎಂದು ಕರೆದರು.

1928ರಲ್ಲಿ ಆಗಮಿಸಿದ ಸೈಮನ್ ಕಮೀಷನ್ ನನ್ನು ರಾಷ್ಟ್ರೀಯ ಕಾಂಗ್ರೆಸ್ ವಿರೋಧಿಸಿದರೆ ಅಂಬೇಡ್ಕರ್ ಸೈಮನ್ ಕಮೀಷನ್‌ಗೆ ಬೇಡಿಕೆಯ ಬಿನ್ನವತ್ತಳೆಯನ್ನು ಸಲ್ಲಿಸಿದರು. ಇದನ್ನು ವಿರೋಧಿಸಿ ಗಾಂಧೀಜಿ ಉಪವಾಸ ಕೈಗೊಳ್ಳುವ ನಿರ್ಣಯ ಮಾಡಿದರು. ಆದರೆ ಸರ್. ತೇಜ ಬಹದ್ದೂರ ಸಪ್ರು ಮತ್ತು ರಾಜಾಜಿಯವರ ಪ್ರಯತ್ನದಿಂದ ಗಾಂಧೀಜಿ ಮತ್ತು ಅಂಬೇಡ್ಕರ್ ಪುನಃ ಒಪ್ಪಂದಕ್ಕೆ ಒಪ್ಪಿದರು. ಇದರಿಂದಾಗಿ ಬ್ರಿಟೀಷ್ ಪ್ರಧಾನಿ ಮೆಕ್‌ಡೊನಾಲ್ಡ್ ಪ್ರಕಟಿಸಿದ್ದ ದಲಿತರಿಗೆ ಪ್ರತ್ಯೇಕತೆ ಕೈಬಿಡಲಾಯಿತು. 1937ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನುಕಟ್ಟಿ ಪೂನಾ ಶಾಸನ ಸಭೆಯ ಸದಸ್ಯರಾದರು. 1946ರ ಜುಲೈ ತಿಂಗಳಲ್ಲಿ ಶಾಸನ ಸಭೆಗೆ 296 ಸದಸ್ಯರನ್ನು ಪ್ರಾಂತೀಯ ಶಾಸನ ಸಭೆಗಳ ಮೂಲಕ ಚುನಾಯಿಸಲು ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಮುಸ್ಲಿಂ ಲೀಗಿನ ಆಳ್ವಿಕೆಗೆ ಒಳಪಟ್ಟ 4 ರಾಜ್ಯಗಳು 9 ದೊಡ್ಡ ರಾಜ್ಯಗಳು ರಾಷ್ಟ್ರೀಯ ಕಾಂಗ್ರೆಸ್ಸಿನ ಆಳ್ವಿಕೆಗೆ ಒಳಪಟ್ಟಿದ್ದವು. ಸಂಯುಕ್ತ ರಾಜ್ಯಗಳಿಂದ 55, ಮದರಾಸು ಪ್ರಾಂತದಿಂದ 49, ಬಾಂಬೆದಿಂದ 19, ಬಿಹಾರದಿಂದ 36 ವಿಭಜಿಸಲ್ಪಡದ ಬಂಗಾಳದಿಂದ 60, ಮುಸ್ಲೀಂಲೀಗ್‌ನಿಂದ 33 ಸದಸ್ಯರು ಆಯ್ಕೆಯಾದರು. ಮೊದಲು ಆಯ್ಕೆಯಾದ 296 ರಲ್ಲಿ ಅಂಬೇಡ್ಕರ್ ಸ್ಥಾನ ಪಡೆದಿರಲಿಲ್ಲ, ಇದಕ್ಕೆ ಪ್ರಮುಖ ಕಾರಣ ಅಂಬೇಡ್ಕರ್ ಕಾಂಗ್ರೆಸ್ಸನ್ನು ವಿರೋಧಿಸುತ್ತಿದ್ದರು. ಈ ಹಂತದಲ್ಲಿ ಜೋಗೆಂದರ್‌ನಾಥ ಮಂಡಲರು "ಅಖಿಲ ಭಾರತ ಪರಿಶಿಷ್ಟ ಜಾತಿಯ ಫೆಡರೇಶನ" ನ ಪರವಾಗಿ ಆಯ್ಕೆಯಾಗಿದ್ದರು. ಅವರು ತಮ್ಮ ನೇಮಕಾತಿಯನ್ನು ಹಿಂತೆಗೆದುಕೊಂಡು ಅಂಬೇಡ್ಕರವರಿಗೆ ಅವಕಾಶ ಮಾಡಿಕೊಟ್ಟರು. 1947ರ ಜೂನ 3 ರಂದು, ಲಾರ್ಡ ಮೌಂಟ್ ಬೆಟನ್ ಭಾರತ ವಿಭಜನೆಯನ್ನು ಪ್ರಕಟಿಸಿದರು. ಇದರಿಂದಾಗಿ ಬಂಗಾಳದ 27, ಮುಸ್ಲಿಂ ಲೀಗಿನ 33 ಜನ ಶಾಸನ ಸಭೆಯಿಂದ ಹೊರ ಹೋದರು. ಹೊರ ಹೋದವರಲ್ಲಿ ಬಂಗಾಳ ಪ್ರಾಂತದಿಂದ ಆಯ್ಕೆಯಾದ ಅಂಬೇಡ್ಕರರು ಸೇರಿದ್ದರು. ಈ ಸಂದರ್ಭದಲ್ಲಿ ಸರ್ದಾರ ವಲ್ಲಭಾಯಿ ಪಟೇಲ್ ಮತ್ತು ಬಾಬು ರಾಜೇಂದ್ರ ಪ್ರಸಾದರು ಅಂಬೇಡ್ಕರರನ್ನು ಸಂವಿಧಾನ ಶಾಸನ ಸಭೆಗೆ ಸೇರಿಸಲು ಪ್ರಯತ್ನ ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ನೆಹರೂ ಇಂಗ್ಲೆಂಡಿನ ಅಂತರಾಷ್ಟ್ರೀಯ ಪ್ರಸಿದ್ಧಿ ಪಡೆದ ಸರ್. ಐವರ್ ಜೆನಿಂಗ್ನ ರನ್ನು ಸೇರಿಸಲು ಪ್ರಯತ್ನಿಸುತ್ತಿದ್ದರು, ಇದಕ್ಕೆ ಗಾಂಧೀಜಿ ಒಪ್ಪಲಿಲ್ಲ. ಗಾಂಧೀಜಿಯವರೆ ಅಂಬೇಡ್ಕರ್ ರವರ ಹೆಸರನ್ನು ಸೂಚಿಸಿದರು ಮತ್ತು ಸ್ವತಂತ್ರ ಭಾರತದ ಸಚಿವ ಸಂಪುಟಕ್ಕೆ ಅಂಬೇಡ್ಕರ್ ಅವಶ್ಯಕತೆಯನ್ನು ಒತ್ತಿ ಹೇಳಿದರು. ಹೀಗಾಗಿ ಅಂಬೇಡ್ಕರ್ ಭಾರತದ ಮೊದಲ ಕಾನುನು ಸಚಿವರಾದರು. "ಭಾರತದ ಸಂವಿಧಾನ ರಚನಾ ಸಮಿತಿಯ ಸಭೆಗಳಲ್ಲಿ ಅಂಬೇಡ್ಕರ್ ರ

ಪುಟ 9 ಕ್ಕೆ ➤



# ಸ್ತ್ರೀ ರತ್ನ, ಕಿತ್ತೂರು ಚೆನ್ನಮ್ಮ

**ಕಳೆದ ಸಂಚಿಕೆಯಲ್ಲಿ ಭಾರತದ ಸಾಧಕಿಯರ ಹಿರಿಮೆಯನ್ನು ನೆನೆದು, ಮಾರ್ಗದರ್ಶಿಯಾಗಿಸಿಕೊಳ್ಳಲು ರಾಷ್ಟ್ರಮಟ್ಟದ ನೆಲೆಯಲ್ಲಿ ಶ್ರಮಿಸಿದವರಿಂದ ಪ್ರಾರಂಭಿಸಲಾಗಿತ್ತು. ಪ್ರಸ್ತುತ ಸಂಚಿಕೆಯಲ್ಲಿ ಕನ್ನಡ ನಾಡಿನ ಧೀಮಂತ ಮಹಿಳೆಯರು ಕೂಡ ದೇಶಕ್ಕಾಗಿ ಅಮೂಲ್ಯವಾದ ಸೇವೆಯನ್ನು ಮಾಡಿದ್ದಾರೆಂಬುದನ್ನು ಸ್ಮರಿಸುವ ಸಲುವಾಗಿ ಕಿತ್ತೂರು ರಾಣಿ ಚೆನ್ನಮನ ಬದುಕಿನ ಧನ್ಯತೆಯ ಕಿರುಪರಿಚಯವನ್ನು ನೀಡಲಾಗಿದೆ.**

'ತೊಟ್ಟಿಲು ತೂಗುವ ಕೈ ಕತ್ತಿಯನ್ನು ಹಿಡಿದು ಝಳಪಿಸೀತು' ಎಂಬ ನಾಣ್ನುಡಿಯದೆ. ಮಹಿಳೆಗೆ ಸಾಧಿಸುವ ಛಲವಿರಬೇಕಷ್ಟೆ. ನಮ್ಮ ಪುಣ್ಯಭೂಮಿ. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಅನೇಕ ಧೀಮಂತ ಮಹಿಳೆಯರಿಗೆ ಜನ್ಮ ನೀಡಿದ ಪುಣ್ಯ ತಾಣವಿದು. ದೇಶಕ್ಕೋಸ್ಕರ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಹೋರಾಟದಲ್ಲಿ ಗೆಲುವು ಸಾಧಿಸಿರುವ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ, ಕೇಳಿದ್ದೇವೆ. ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ಸಾಬೀತು ಮಾಡಿ ತೋರಿಸಿದ್ದೇವೆ. ಯಾವ ಕ್ಷೇತ್ರದಲ್ಲಿ ನೋಡಿದರೂ ಮಹಿಳೆಯರದೇ ಮೇಲುಗೈ. ಈ ಸಂದರ್ಭದಲ್ಲಿ ಭಾರತದ ಮಹಿಳಾ ರತ್ನವೊಂದನ್ನು ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದೇನೆ. ಇಂಗ್ಲೀಷರ ದೌರ್ಜನ್ಯವನ್ನು ಕಿತ್ತೊಗೆಯಲು ಪ್ರಯತ್ನಿಸಿದ ಸ್ತ್ರೀ ಸ್ವತಂತ್ರ್ಯ ಹೋರಾಟಗಾರ್ತಿ, ಕನ್ನಡ ನಾಡಿನ ಒಬ್ಬ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮ.

ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆಯಿಂದ ಸುಮಾರು 6 ಕಿ.ಮಿ ದೂರವಿರುವ  ಕಾಕತಿ ಎಂಬಲ್ಲಿ ಅಕ್ಟೋಬರ್ 23, 1778 ರಲ್ಲಿ ದೇಸಾಯಿಯ ಮನೆತನದಲ್ಲಿ ಚೆನ್ನಮ್ಮನ ಜನನವಾಯಿತು. ರಾಜಕಳೆಯಿಂದ ಬೆಳಗುತ್ತಿದ್ದ ಈ ಮಗುವೇ ಮುಂದೆ ಕಿತ್ತೂರಿನ ಸುಪ್ರಸಿದ್ಧ ರಾಣಿ ಚೆನ್ನಮ್ಮನಾದಳು. ಮಗು ಜನಿಸಿದಾಗ ಜಂಗಮ ಮೂರ್ತಿಗಳು ಜನನ ಮುಹೂರ್ತವನ್ನು ಪರಿಶೀಲಿಸಿ ಈ ಮಗು ನಾಡಿನ ರಾಣಿಯಾಗಿ ವೀರಮಾತೆಯಾಗಿ ವಿಖ್ಯಾತೆಯಾಗುವುದಾಗಿ ಭವಿಷ್ಯ ನುಡಿದಿದ್ದರಂತೆ. ಈ ಭವಿಷ್ಯವನ್ನು ಕೇಳಿದ ಧೂಳಪ್ಪಗೌಡರು ಮಗಳಿಗೆ ಸಕಲ ವಿದ್ಯೆಯನ್ನು ಕಲಿಸಿ ಕರಗತ ಮಾಡಿಸಬೇಕೆಂದು ಸಂಕಲ್ಪತೊಟ್ಟರು. ಆಕೆಯ ಶಿಕ್ಷಣಕ್ಕಾಗಿ ಶ್ರೇಷ್ಠರಾದ ಇಬ್ಬರು ಗುರುಗಳನ್ನು ನೇಮಿಸಿದರು. ಅವರು ಅವಳಿಗೆ ಎಲ್ಲ ಶಾಸ್ತ್ರಗಳನ್ನೂ, ಶಿವಶರಣರ, ವೀರರ ಜೀವನ ವೃತ್ತಾಂತಗಳನ್ನೂ, ಮಹಾ ಆದರ್ಶಗಳನ್ನೂ ಬೋಧಿಸತೊಡಗಿದರು. ಬೆಳೆಬೆಳೆದಂತೆ ಚೆನ್ನಮ್ಮ ಸಾಹಿತ್ಯ, ಸಂಗೀತ, ಸಂಸ್ಕೃತಿ, ಇತಿಹಾಸ ಹಾಗೂ ರಾಜಕಾರಣಗಳಲ್ಲಿ ಜ್ಞಾನವನ್ನು ಸಂಪಾದಿಸತೊಡಗಿದಳು. ರಾಜ ಮನೆತನದ ಗಂಡು ಹುಡುಗರು ಕಲಿಯುವ ಕುದುರೆ ಸವಾರಿ ಮತ್ತು ಯುದ್ಧ ವಿದ್ಯೆಗಳನ್ನೂ ಕಲಿತಳು.

16 ವರ್ಷದವಳಾದಾಗ ಧೀಮಂತಳು, ಶ್ರೀಮಂತಳು, ಶೂರಳು ಬಿಲ್ಲು ಬಾಣ ಹಿಡಿದು ಬೇಟೆಯಾಡುತ್ತಿದ್ದಳು. ಕುದುರೆ ಸವಾರಿ, ಭರ್ಜಿ ಎಸೆತ, ಕತ್ತಿ ವರಸೆಗಳಲ್ಲಿ ರಾಜ ಗಂಡುಗಲಿ ಗಳಿಗೂ ಕಡಿಮೆ ಎನಿಸಷ್ಟು ಅಪ್ರತಿಮ ಜಾಣೆಯಾಗಿದ್ದಳು.

ಕಿತ್ತೂರಿನ ದೊರೆ ಮಲ್ಲಸರ್ಜ ಈ ಸುಂದರಿ ಚೆನ್ನಮ್ಮ ಬಗ್ಗೆ ಸಾಕಷ್ಟು ಕೇಳಿ ತಿಳಿದುಕೊಂಡಿದ್ದನು. ಈ ತರುಣಿಯಾದ ಚೆನ್ನಮ್ಮ ಕೂಡ ಮಲ್ಲಸರ್ಜ ದೊರೆಯ ಕೀರ್ತಿ ಪರಾಕ್ರಮಗಳನ್ನು ಕೇಳಿ ಮಾರುಹೋಗಿದ್ದಳು.

ಹಿರಿಯರು ಇವರಿಬ್ಬರಿಗೂ ಮದುವೆ ಮಾಡಿದರು. ಮಲ್ಲಸರ್ಜನ ಹಿರಿಯ ಹೆಂಡತಿ ರುದ್ರಮ್ಮ. ಚೆನ್ನಮ್ಮ ಕಿರಿಯ ಹೆಂಡತಿ. ಹಿರಿಯ ಹೆಂಡತಿ ರುದ್ರಮ್ಮ, ತನ್ನ ಗಂಡನಿಗೆ ಕಿರಿಯ ಹೆಂಡತಿಯಾದ ಚೆನ್ನಮ್ಮನನ್ನು ಬಹಳ ಪ್ರೀತಿ ಆದರದಿಂದ ಕಾಣುತ್ತಿದುದು ಆಶ್ಚರ್ಯವೇ ಹೌದು. ಚೆನ್ನಮ್ಮ ಕೇವಲ ರಾಣಿಯಾಗಿ ಅರಮನೆಯ ಅಲಂಕಾರವಾಗಲು ಬಯಸಲಿಲ್ಲ. ರಾಜ್ಯದ ಆಗುಹೋಗುಗಳಲ್ಲಿ ಆಸಕ್ತಿಯನ್ನು ತಳೆದು ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಪತಿಯ ಬಲಗೈಯಾದಳು. ಕಿತ್ತೂರಿನ ಜನತೆ ಚೆನ್ನಮ್ಮನನ್ನು ಮಹಾ ತಾಯಿಯೆಂದೇ  ಪ್ರೀತಿಸತೊಡಗಿದ್ದರು.

ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿದ್ದ ಕಿತ್ತೂರಿನ ಅರಮನೆಗೆ ವಜ್ರಾಘಾತವಾಗುವಂತಹ ಪ್ರಸಂಗ ಒಂದು ಬಂದಿತು. ವಂಚನೆಯಿಂದ ಪೇಶ್ವೆಯರು ಮಲ್ಲಸರ್ಜನನ್ನು ಸೆರೆಹಿಡಿದು ಕಾರಾಗೃಹಕ್ಕೆ ತಳ್ಳಿದರು. ಆದರೆ ಕಾಯಿಲೆಗೆ ತುತ್ತಾದ ಕೂಡಲೇ ಬಿಡುಗಡೆ ಮಾಡಿದರಾದರೂ ದಾರಿಯಲ್ಲೇ ಮಲ್ಲಸರ್ಜ ಕೊನೆಯುಸಿರೆಳೆದನು. 1816ರಲ್ಲಿ ಕಿತ್ತೂರು ದುಃಖದ ಕಡಲಿನಲ್ಲಿ ಮುಳುಗಿತು. 'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ' ಎಂಬುದನ್ನು ತಿಳಿದಿದ್ದ ಚೆನ್ನಮ್ಮ 'ತಾಳ್ಮೆ ಇರುವವರು ಏನನ್ನಾದರೂ ಸಾಧಿಸಬಹುದು' ಎಂದುಕೊಂಡು ಧೃತಿಗೆಡದೆ ತನ್ನ ಅಕ್ಕಳಾದ ರುದ್ರಮ್ಮನ ಹಿರಿಯ ಮಗ ಶಿವಲಿಂಗರುದ್ರ ಸರ್ಜನನ್ನು ಪಟ್ಟಕ್ಕೆ ಕೂಡಿಸಿ ರಾಜ್ಯದ ಆಡಳಿತ ಸೂತ್ರವು ಸರಾಗವಾಗುವಂತೆ ನೋಡಿಕೊಂಡಳು. ಚಿಕ್ಕಮ್ಮನ ಮಾರ್ಗದರ್ಶನದಲ್ಲೇ ಶಿವಲಿಂಗರುದ್ರ ಸರ್ಜ (1816–1924) ಆಡಳಿತ ನಡೆಸಿದ.

**(ಮುಂದಿನ ಸಂಚಿಕೆಗೆ...)**

# ಶೈಕ್ಷಣಿಕ ಸಂವಾದ

- ಶೈಕ್ಷಣಿಕ ಕ್ಷೇತ್ರದಲ್ಲಿ ಇಂದಿನ ಕೊರತೆಗಳೇನು?
- ಆಗಬೇಕಾಗಿರುವ ಬದಲಾವಣೆಗಳೇನು?
- ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನವು ಹೇಗಿರಬೇಕು?
- ಸರ್ಕಾರದಿಂದ ನಮ್ಮ ಅಪೇಕ್ಷೆಗಳೇನು?

ಮುಂತಾದ ವಿಷಯಗಳ ಬಗ್ಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕವು ಶಿಕ್ಷಕರಿಗಾಗಿ ಶೈಕ್ಷಣಿಕ ಸಂವಾದವನ್ನು 2.4.14 ರಂದು ಏರ್ಪಡಿಸಿತ್ತು.

ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾಗಿರುವ ಶ್ರೀ.ವಿ.ರಾಜುರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮದ ಔಚಿತ್ಯವನ್ನು ವಿವರಿಸಿದರು.

ಶಿಕ್ಷಕ ಸಂಘವು ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯತೆಯನ್ನು ಅರಳಿಸಲು ಶ್ರಮಿಸುತ್ತಿದೆ. ಶಿಕ್ಷಕರು ಯಾವುದೇ ರೀತಿಯ ದಮನಕ್ಕೆ ಒಳಗಾಗದಂತೆ ಕರ್ತವ್ಯ ನಿರ್ವಹಿಸಲು ಪ್ರೇರೇಪಿಸುತ್ತಿದೆ.

ವಿದ್ಯಾರ್ಥಿಗಳಲ್ಲಿ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ರಾಷ್ಟ್ರೀಯ ಮೌಲ್ಯಗಳನ್ನು ತುಂಬಿ ಅವರನ್ನು ರಾಷ್ಟ್ರದ ಉತ್ತಮ ನಾಗರೀಕರನ್ನಾಗಿ ರೂಪಿಸುವಂತೆ ಶಿಕ್ಷಕರಿಗೆ ಕರೆ ನೀಡುತ್ತಿರುವುದಾಗಿ ತಿಳಿಸಿದರು. 1965 ರಿಂದ ಶಿಕ್ಷಕ ಸಂಘವು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾ ಬಂದಿದೆ. ಅನೇಕ ಗಣ್ಯರು, ಶಿಕ್ಷಣ ತಜ್ಞರು ಸಂಘದ ಕಾರ್ಯವೈಖರಿಯನ್ನು ಮೆಚ್ಚಿ ಅಭಿನಂದಿಸಿರುವ ಬಗ್ಗೆ ಪ್ರಸ್ತಾಪಿಸಿದರು.

ಶಿಕ್ಷಕ ಸಂಘವು, ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಹೋರಾಟವನ್ನು ಮಾಡುತ್ತಾ ಬಂದಿದೆ. ಶಿಕ್ಷಕರಿಗಾಗಿ ವಿಚಾರ ಸಂಕಿರಣ, ಚರ್ಚಾಗೋಷ್ಠಿ, ಶೈಕ್ಷಣಿಕ ಕಾರ್ಯಾಗಾರಗಳನ್ನು ನಡೆಸುತ್ತಾ ಬಂದಿದೆ. ಗುರುವಂದನಾ, ಸಂಕಲ್ಪದಿನ, ಪ್ರತಿಭಾ ಪುರಸ್ಕಾರ, ಮುಂತಾದ ಕಾರ್ಯಕ್ರಮಗಳ ಮೂಲಕ ಸೇವೆಯನ್ನು ಸಲ್ಲಿಸುತ್ತಿದೆ ಎಂದು ವಿ.ರಾಜು ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಹೇಳಿದರು.

ಸಂವಾದ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದ್ದರು. ಶಿಕ್ಷಣಕ್ಷೇತ್ರದ ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು.

- ವಿದ್ಯಾರ್ಥಿಗಳಲ್ಲಿ ಮೌಲ್ಯಗಳು ಕಡಿಮೆಯಾಗುತ್ತಿದೆ.
- ವಿದ್ಯಾರ್ಥಿಗಳನ್ನು ತಿದ್ದುವಾಗ ಒಂದು ವೇಳೆ ಅನಿವಾರ್ಯವಾಗಿ ದಂಡಿಸಬೇಕಾದ ಪರಿಸ್ಥಿತಿ ಬಂದರೆ ಪೋಷಕರ ಹಾಗೂ ಮಾಧ್ಯಮಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.
- ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಬಗ್ಗೆ, ಶಿಕ್ಷಣದ ಬಗ್ಗೆ ಗೌರವ ಕಡಿಮೆಯಾಗುತ್ತದೆ.
- ಶಿಕ್ಷಕರನ್ನು ಜನಗಣತಿ, ಚುನಾವಣೆ ಮುಂತಾದ ಶಿಕ್ಷಣೇತರ ಕೆಲಸ ಮಾಡಲು ಬಳಸಿಕೊಳ್ಳಲಾಗುತ್ತದೆ. ಅನಾರೋಗ್ಯ ಕಾರಣಗಳನ್ನೂ ಪರಿಗಣಿಸದೆ ಕರ್ತವ್ಯಕ್ಕೆ ಹಾಜರಾಗುವಂತೆ ಆದೇಶಿಸಲಾಗುತ್ತಿದೆ.
- ಸಿ.ಸಿ.ಇ ಶಿಕ್ಷಣ ಪದ್ಧತಿ ಕೇವಲ ದಾಖಲೆಗಳನ್ನು ನಿರ್ವಹಿಸಲು ಹೆಚ್ಚಿನ ಸಮಯ ವಿನಿಯೋಗಿಸಬೇಕಾಗಿದೆ.

ಮುಂತಾದ ಸಮಸ್ಯೆಗಳನ್ನು ಶಿಕ್ಷಕರು ಚರ್ಚಿಸಿದರು. ಸಮಾರಂಭದಲ್ಲಿ ಉಪಸ್ಥಿತರಿದ್ದ ಶಿಕ್ಷಕ ಸಂಘದ ರಾಜ್ಯದ ಕಾರ್ಯಾಧ್ಯಕ್ಷರಾಗಿರುವ ಶ್ರೀ ಅರುಣ್ ಶಹಾಪುರ ಅವರು ಶಿಕ್ಷಕರ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ನೀಡಿದರು. ಶಿಕ್ಷಣ ಕ್ಷೇತ್ರದಲ್ಲಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಕ ಸಂಘವು ಹೇಗೆ ಹೋರಾಡುತ್ತಿದೆ ಎಂಬುದನ್ನು ವಿವರಿಸಿದರು. ಸದನದ ಒಳಗೆ ಹಾಗೂ ಹೊರಗೆ ಶಿಕ್ಷಕ ಸಂಘದ ಹೋರಾಟದ ಫಲವಾಗಿ ಶಿಕ್ಷಕರಿಗೆ ಆಗಿರುವ ಅನುಕೂಲಗಳ ಬಗ್ಗೆ ವಿವರಿಸಿದರು.

ನಿವೃತ್ತ D.D.P.I. ಆಗಿರುವ ಶ್ರೀ ಎಂ. ನೀಲಯ್ಯರವರು ಮಾತನಾಡಿ ಶಿಕ್ಷಕ ಸಂಘದ ಸಾಧನೆಗಳ ಬಗ್ಗೆ ತಿಳಿಸಿದರು. ಸ್ವತಃ ತಾವು ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಅವಿರತ ಶ್ರಮಿಸುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಶಿಕ್ಷಕ ಸಂಘದ ರಾಷ್ಟ್ರ ನಾಯಕರಾಗಿರುವ ಮಾನ್ಯ ಕೃ. ನರಹರಿಯವರು ಶಿಕ್ಷಕರಿಗೆ ಮಾರ್ಗದರ್ಶನ ಮಾಡಿದರು.

ಸಾಮಾಜಿಕ ಕಾರ್ಯಕರ್ತರಾಗಿರುವ ಶ್ರೀ ವಿ. ಮಂಜುನಾಥರವರು, ಶ್ರೀ.ಹೆಚ್.ನಾಗಭೂಷಣರಾವ್

ಶ್ರೀಮತಿ ಆರ್. ಸೀತಾಲಕ್ಷ್ಮಿ, ಶ್ರೀ ಜಿ.ಎಸ್. ಕೃಷ್ಣಮೂರ್ತಿ, ಶ್ರೀ ಚಿದಾನಂದ ಪಾಟೀಲ್, ಶ್ರೀ ಜೆ.ಎಂ ಜೋಶಿ, ಶ್ರೀ ತಿಪ್ಪೇಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

ಶ್ರೀಮತಿ ಪಿ.ಆರ್. ರುಕ್ಮಿಣಿಯವರು ಪ್ರಾರ್ಥನೆ ಮಾಡಿದರು. ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಂದ್ರರವರು ವಂದಿಸಿದರು.

– ವಿ. ರಾಜ

# ದೇವರ ದಾಸಿಮಯ್ಯ



**ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೆ?,**
**ಜಳ್ಳು ತೂರಿದಲ್ಲಿ ಭತ್ತ ಉಂಟೇ?'**
**ಹಂದಿ ಶ್ರೀ ಗಂಧವ ಪೂಸಿದರೇನು ಗಂಧರಾಜನಾಗಬಲ್ಲುದೇ?,**
**ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟ ನೆಗೆದಂತೆ,**
**ಕತ್ತೆ ಬಲ್ಲುದೇ ಕತ್ತುರಿಯ ವಾಸನೆಯ?**
**ಜ್ವರವಿಡಿದ ಬಾಯಿಗೆ ನೊರೆವಾಲು ಒಲಿಯುವುದೇ?**
**ಕಡೆಗೀಲಲ್ಲದ ಬಂಡಿ ಹೊಡೆಗೆಡುವುದು ಮಾಂಬುದೇ?**

ಮುಂತಾದ ಆಡು ನುಡಿಯ ಮಾತುಗಳನ್ನು ತಮ್ಮ ವಚನಗಳಲ್ಲಿ ಸೇರಿಸಿ ವಚನದ ಸೊಬಗನ್ನು, ಸೊಗಸನ್ನು ಹೆಚ್ಚಿಸಿರುವವರು ಆದ್ಯ ವಚನಕಾರರೆನಿಸಿರುವ ದೇವರದಾಸಿಮಯ್ಯ ಅವರು.

ದೇವರ ದಾಸಿಮಯ್ಯ ಅವರ ವಚನಗಳ ಪ್ರಭಾವವು ಮುಂದಿನ ಇಡೀ ವಚನ ಸಾಹಿತ್ಯದ ಮೇಲೆ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬಸವಣ್ಣ ಅವರು ದಾಸಿಮಯ್ಯ ಅವರ ಭಾವವನ್ನೂ, ಅನುಭಾವವನ್ನೂ ಅನುಸರಿಸಿದ್ದಾರೆ. ಅಲ್ಲಮ ಪ್ರಭು, ಅಕ್ಕಮಹಾದೇವಿ, ಸರ್ವಜ್ಞ ಮುಂತಾದ ವಚನಕಾರರು ಇವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೀಗೆ ವಚನ ಸಾಹಿತ್ಯದ ಆದ್ಯ ವಚನಕಾರರಾದ ದೇವರ ದಾಸಿಮಯ್ಯ ಅವರು ಉತ್ತಮ ವಚನಗಳನ್ನು ನೀಡಿ ಶ್ರೇಷ್ಠ ವಚನಕಾರರೆಂಬ ಬಿರುದಿಗೆ ಪಾತ್ರರಾದರು.

ಇದುವರೆಗೆ ದಾಸಿಮಯ್ಯ ಅವರ 142 ವಚನಗಳು ದೊರೆತಿವೆ. **'ರಾಮನಾಥ'** ಎಂಬುದು ಇವರ ಅಂಕಿತ ನಾಮ. ಅವರ ವಚನಗಳಲ್ಲಿ ಭಕ್ತಿಯ ಮೇಲ್ಮೆಯನ್ನು, ತತ್ತ್ವದ ಆಳವನ್ನು ಅರಿಯಬಹುದಾಗಿದೆ. ಆಳವಾದ ಅರ್ಥ, ಭಾವ, ಧ್ವನಿ, ಪರಮಾತ್ಮನ ಸ್ವರೂಪ, ಪರಮಾತ್ಮ ಜೀವಾತ್ಮಗಳಿಗಿರುವ ಸಮ್ಯಕ ಸಂಬಂಧ, ಮೋಕ್ಷ ಸ್ವರೂಪ, ಯೋಗ್ಯ ಗುರುವಿನ ಲಕ್ಷಣ, ಭಕ್ತಾಭಿಮಾನ, ದಾಸ್ಯಭಾವ, ಸಮರ್ಪಣಾ ಭಾವ, ಧರ್ಮ, ನೀತಿ ಮೊದಲಾದ ವಿಷಯಗಳು ಇವರ ವಚನಗಳಲ್ಲಿ ಪ್ರತಿಪಾದಿತವಾಗಿವೆ. ಉಪಮೆ-ರೂಪಕಗಳ ಸಹಾಯದಿಂದ, ಸರಳವಾದ ಭಾಷೆಯಲ್ಲಿ ಅರ್ಥ ಶ್ರೀಮಂತಿಕೆಯಿಂದ ದಾಸಿಮಯ್ಯ ಅವರು ವಚನಗಳನ್ನು ರಚಿಸಿದ್ದಾರೆ.

ದೇವರ ದಾಸಿಮಯ್ಯ ಅವರು 11ನೇ ಶತಮಾನದ ಉತ್ತರಾರ್ಧ ಹಾಗೂ 12ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಹಿರಿಯ ಶಿವಶರಣರು ಹಾಗೂ ಆದ್ಯ ವಚನಕಾರರು.

ದೇವರ ದಾಸಿಮಯ್ಯ ಅವರು ಶಂಕರ ದಾಸಿಮಯ್ಯ ಅವರ ಸಮಕಾಲೀನರು. ಸುರಪುರ ತಾಲ್ಲೂಕಿನ ಮುದನೂರಿನಲ್ಲಿ ಇವರು ಜನಿಸಿದರು. ಇವರಿಗೆ ಮುದನೂರು ದಾಸಿಮಯ್ಯ, ಜೇಡರ ದಾಸಿಮಯ್ಯ ಎಂಬ ಹೆಸರುಗಳೂ ಇವೆ. ಜೇಡರ ದಾಸಿಮಯ್ಯ ಹಾಗೂ ದೇವರ ದಾಸಿಮಯ್ಯ ಇಬ್ಬರು ಬೇರೆ ಬೇರೆ ವ್ಯಕ್ತಿಗಳೆಂದು ಇಬ್ಬರೂ ಒಬ್ಬರದೇ ಹೆಸರೆಂದೂ ವಾದವಿವಾದಗಳಿವೆ. ಇವರ ಆರಾಧ್ಯ ದೈವ 'ರಾಮನಾಥ'. ದುಗ್ಗಳೆ ಎಂಬ ಶ್ರೇಷ್ಠ ಶಿವಭಕ್ತೆ ದಾಸಿಮಯ್ಯ ಅವರ ಪತ್ನಿ. ಇವರ ದಾಂಪತ್ಯ ಸಾಮರಸ್ಯದಿಂದ ಕೂಡಿತ್ತು. ನೇಯ್ಗೆ ಇವರ ಕಾಯಕವಾಗಿತ್ತು. ಒಮ್ಮೆ ದಾಸಿಮಯ್ಯ ಅವರ ಶ್ರೇಷ್ಠ ಭಕ್ತಿಗೆ ಮೆಚ್ಚಿ ಶಿವನು ಜಂಗಮ ರೂಪದಲ್ಲಿ ಬಂದು ನೇಯ್ದ ವಸ್ತ್ರವನ್ನು ಕಾಣಿಕೆಯಾಗಿ ಪಡೆದು, ತವ ನಿಧಿಯನ್ನು ದೇವರದಾಸಿಮಯ್ಯ ಅವರಿಗೆ ಕರುಣಿಸಿದನೆಂದು ಪ್ರತೀತಿ ಇದೆ. ಬಸವಣ್ಣ ಅವರೂ ಸಹ ದೇವರದಾಸಿಮಯ್ಯ ಅವರ ವಚನಗಳನ್ನು ಮೆಚ್ಚಿದ್ದಾರೆ. ಅವರ ದಾಂಪತ್ಯವನ್ನು ಹೊಗಳಿದ್ದಾರೆ.


ದೇವರ ದಾಸಿಮಯ್ಯ ಅವರು ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಕುಂಬಾರ ಗುಂಡಯ್ಯ, ಕೆಂಬಾವಿಯ ಭೋಗಣ್ಣ ಮೊದಲಾದ ವಚನಕಾರರನ್ನು ಸ್ಮರಿಸಿದ್ದಾರೆ.

ಬಸವಣ್ಣನವರ ವಚನಗಳು, ಬಸವಪುರಾಣ, ಶಿವತತ್ತ್ವ ಚಿಂತಾಮಣಿ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಮೊದಲಾದ ಗ್ರಂಥಗಳಲ್ಲಿ ಹಾಗೂ, ದೇವಾಂಗ ಪುರಾಣ, ದಾಸಿಮಯ್ಯ ಪುರಾಣಗಳಲ್ಲಿ ದೇವರ ದಾಸಿಮಯ್ಯ ಅವರ ಜೀವನದ ಬಗ್ಗೆ ಮಾಹಿತಿ ಇದೆ.

ದೇವರ ದಾಸಿಮಯ್ಯ ಅವರು ಅನೇಕ ಪವಾಡಗಳನ್ನು ಮೆರೆದಿದ್ದಾರೆಂಬ ಪ್ರತೀತಿ ಇದೆ. ಪೊಟ್ಟಲ ಕೆರೆಯಲ್ಲಿ ಜೈನರನ್ನು ಸೋಲಿಸಿದ್ದು, ರಾಣಿ ಸುಗ್ಗಲೆಗೆ ಶಿವದೀಕ್ಷೆ ಕೊಟ್ಟಿದ್ದು, ಘಟಸರ್ಪವನ್ನು ಶಿವಲಿಂಗ ಮಾಡಿ ಪೊಟ್ಟಲಕೆರೆಯಲ್ಲಿ ಪ್ರತಿಷ್ಠಾಪಿಸಿದ್ದು, ಪ್ರಮುಖವಾದವುಗಳು.

ಆದ್ಯ ವಚನಕಾರರಾಗಿರುವ ದೇವರ ದಾಸಿಮಯ್ಯನ ವಚನಗಳನ್ನು ಅಧ್ಯಯನ ಮಾಡಿ ಶ್ರದ್ಧೆ, ಭಕ್ತಿಗಳನ್ನು ಬೆಳೆಸಿಕೊಳ್ಳೋಣ.

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷ**



➢ ಪುಟ 5 ರಿಂದ..... ಅಂಬೇಡ್ಕರ್

ತಯಾರಿ ಮತ್ತು ಉತ್ಸಾಹ ಅತಿಯಾದದ್ದು, ಸಂಪೂರ್ಣ ಜವಾಬ್ದಾರಿ ಹೊತ್ತು ಸಂವಿಧಾನ ರಚನಾಕಾರ್ಯವನ್ನು ನೆರವೇರಿಸಿದ್ದಕ್ಕೆ ಭಾರತೀಯರೆಲ್ಲ ಚಿರಋಣಿ ಗಳಾಗಿರಬೇಕು" ಎಂದು ಟಿ.ಟಿ.ಕೃಷ್ಣಮಾಚಾರಿಯವರು ಸಭೆಯಲ್ಲಿ ಹೇಳಿದ್ದು ಅಂಬೇಡ್ಕರರ ಬುದ್ಧಿವಂತಿಕೆಯ ಮಹತ್ವವನ್ನು ತಿಳಿಸುತ್ತದೆ.

1951ರಲ್ಲಿ ಹಿಂದೂ ಕೋಡ ಬಿಲ್ಲನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದರು. ಮತ್ತು ಅಲ್ಲಿಯ ಸದಸ್ಯರು ಕೇಳಿದ ಎಲ್ಲ ಸಂದೇಹಗಳಿಗೂ ಅಂಬೇಡ್ಕರ್ ಸಮರ್ಪಕವಾಗಿ ಉತ್ತರಿಸಿದರು. ಆದರೂ ನೆಹರೂರವರ ಬೆಂಬಲವಿಲ್ಲದೆ ಹಿಂದೂ ಕೋಡ ಬಲ್ ಸೋಲನ್ನು ಅನುಭವಿಸಿತು. ಈ ಘಟನೆಯಿಂದ ನೊಂದು ಅಂಬೇಡ್ಕರ 1951ರ ಸಪ್ಟೆಂಬರ್ 27ರಂದು ರಾಜೀನಾಮೆಯನ್ನು ನೆಹರೂರವರಿಗೆ ನೀಡಿದರು. ಪದವಿ ತೊರೆದ ಮೇಲೂ ಸಾಮಾಜಿಕ ನ್ಯಾಯಕ್ಕಾಗಿ ಹೊರಾಡುತ್ತಲೇ ಇದ್ದರು. 1956ರ ಅಕ್ಟೋಬರ್ 14 ರಂದು ನಾಗಪೂರದ ದೀಕ್ಷಾ ಭೂಮಿಯಲ್ಲಿ ಬೌದ್ಧ ಮತವನ್ನು ಸ್ವೀಕರಿಸಿದರು. 1956ರ ಡಿಸೆಂಬರ್ 6 ರಂದು ನವದೆಹಲಿಯ ತಮ್ಮ ಮನೆಯಲ್ಲಿ ಚಿರನಿದ್ರೆಯಲ್ಲಿ ಅಮರರಾದರು.

ಸಂವಿಧಾನ ಶಾಸನ ಸಭೆಯಲ್ಲಿ ಕೊನೆಯ ಅಧ್ಯಕ್ಷೀಯ ಭಾಷಣ ಮಾಡುತ್ತ "ನಿರ್ಣಯ ಸಭೆಗೆ ನಾನು ಪ್ರವೇಶಿಸಿದಾಗ ಪರಿಶಿಷ್ಟ ವರ್ಗದ ಜನರ ಒಳಿತನ್ನು ಕಾಪಾಡುವುದಕ್ಕಿಂತ ಬೇರೆ ದೊಡ್ಡದಾದ ನೀರಿಕ್ಷೆಗಳು ಯಾವುವೂ ನನಗಿರಲಿಲ್ಲ, ಹೆಚ್ಚಿನ ಹೊಣೆಗಾರಿಕೆಯ ಕೆಲಸಗಳನ್ನು ನನಗೆ ಒಪ್ಪಿಸಲಾಗುತ್ತದೆ ಎಂಬುದನ್ನು ನಾನು ಗ್ರಹಿಸಿಯೇ ಇರಲಿಲ್ಲ ಆದ್ದರಿಂದ ರಚನಾ ಸಮಿತಿಗೆ ಸಭೆಯು ನನ್ನನ್ನು ಆಯ್ಕೆ ಮಾಡಿದಾಗ ನಾನು ಆಶ್ಚರ್ಯ ಪಟ್ಟೆ, ಅದರಲ್ಲೂ ರಚನಾ ಸಮಿತಿಯ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟ ಸಂದರ್ಭದಲ್ಲಿ ನನ್ನ ಆಶ್ಚರ್ಯ ಇನ್ನೂ ಹೆಚ್ಚಾಯಿತು. ನನಗಿಂತ ಹಿರಿಯರು, ಉತ್ತಮರು, ಅರ್ಹರಾದವರೂ ರಚನಾ ಸಮಿತಿಲ್ಲಿದ್ದಾರೆ, ಅವರಲ್ಲಿ ಸರ್. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಒಬ್ಬರಾಗಿದ್ದರು" ಎಂದು ಹೇಳಿದ್ದು ಅಂಬೇಡ್ಕರ್‌ರ ಪ್ರಾಮಾಣಿಕತೆಯನ್ನು ತಿಳಿಸುತ್ತದೆ ಹಾಗು ಶಾಸನ ಸಭೆಯಲ್ಲಿ ಕಮ್ಯೂನಿಸ್ಟರು ಮತ್ತು ಸೋಷ್ಯಲಿಸ್ಟರು ಶಾಸನಗಳನ್ನು ವಿರೋಧಿಸಿದರು. ಆಗ ಅಂಬೇಡ್ಕರರು ಸರ್ವಾಧಿಕಾರ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಪ್ಪಲು ಸಾಧ್ಯವಿಲ್ಲವೆಂದು ಹೇಳಿದರು.

ಕೊನೆಯದಾಗಿ ಡಾ.ಅಂಬೇಡ್ಕರ ಹೇಳಿರುವ ಐರ್ಲೆಂಡ ದೇಶದ ಡೇನಿಯಲ್.ಓ.ಕೆನ್ನೆಲ್ ರವರ ಹೇಳಿಕೆಯಾದ "ಯಾವ ಮನುಷ್ಯನು ತನ್ನ ಗೌರವವನ್ನು ಬೆಲೆಗೆ ಮಾರಿ ಕೃತಜ್ಞತಾ ಭಾವದಿಂದ ಇರಲು ಸಾಧ್ಯವಿಲ್ಲ, ಯಾವ ಸ್ತ್ರೀಯೂ ತನ್ನ ಪಾತಿವ್ರತ್ಯವನ್ನು ಬೆಲೆಗೆ ಕೊಟ್ಟು ಕೃತಜ್ಞತೆಯಿಂದ ಪ್ರಶಂಸಿಸಲು ಸಾಧ್ಯವಿಲ್ಲ. ಯಾವ ದೇಶವು ತನ್ನ ಸ್ವಾತಂತ್ರ ವನ್ನು ಬೆಲೆಗೆ ಕೊಟ್ಟು ಕೃತಜ್ಞತೆಯಿಂದ ಪ್ರಕಟಿಸಲು ಸಾಧ್ಯವಿಲ್ಲ" ಎನ್ನುವುದು ದೇಶದ ನಿವಾಸಿಗಳಾದ ನಮಗೆ ನಮ್ಮ ಸ್ವಾತಂತ್ರವನ್ನು ರಕ್ಷಿಸಿಕೊಳ್ಳುವ ಮಹತ್ವವನ್ನು ಸಾರುತ್ತದೆ. ಅಂಬೇಡ್ಕರ ಜಯಂತಿಯನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಸ್ವಾತಂತ್ರದ ಉಳಿವಿಗೆ ಪ್ರಜಾಪ್ರಭುತ್ವದ ಬೆಳವಣಿಗೆಗೆ ನಾವೆಲ್ಲಾ ಅಣಿಯಾಗೋಣ.

**ಚಿದಾನಂದ D. ಪಾಟೀಲ**
**ಎಂ.ಎ (ಇತಿಹಾಸ)**
**ಎಂ.ಎ (ಸಮಾಜಶಾಸ್ತ್ರ)**
**ಎಂ.ಎಸ್ಸಿ (ಭೂಗೋಳಶಾಸ್ತ್ರ)**
**ಬಿ.ಇಡಿ.,**
**ಕನಕಪುರ. chida@patil.com**



➢ ಪುಟ 4 ರಿಂದ..... ಶ್ರೀರಾಮ ಚರಿತ

ಸಿದ್ಧರಾದರು! ಅಗಸನ ಮಾತಿಗೆ ಶ್ರೀರಾಮ ಪತ್ನಿಯನ್ನು ತೊರೆದ. ಎಂಥ ಪ್ರಜಾರಂಜಕ ಶ್ರೀ ರಾಮಚಂದ್ರ, ರಾಜಧರ್ಮವನ್ನು ಹೇಗೆ ಪಾಲಿಸಬೇಕೆಂಬ ಆದರ್ಶವನ್ನು ವಾಲ್ಮೀಕಿ, ರಾಮನ ಮೂಲಕ ತಿಳಿಸಿದ್ದಾನೆ.

## ದೇಶಭಕ್ತಿ

ತಾಯಿ ಹೇಗೆ ದೇವರ ಸಮಾನವೋ, ತಾಯ್ನಾಡು ಸಹ ದೇವರಸಮಾನ. ನಮ್ಮ ಸಂಸ್ಕೃತಿಯಲ್ಲಿ ನಮ್ಮನ್ನು ಪೋಷಿಸುವ ಎಲ್ಲರೂ ತಾಯಿಗೆ ಸಮಾನ. 'ಅನ್ನ ಉಣಿಸುವ ಭೂಮಿ ಭೂಮಾತೆ. ನೀರುಣಿಸುವ ನದಿ ಗಂಗಾಮಾತೆ, ಹಾಲುಣಿಸುವ ಹಸು ಗೋಮಾತೆ.

ರಾವಣನ ವಧೆಯ ನಂತರ, ಲಂಕೆಯ ವೈಭವಕ್ಕೆ ಮನಸೋತ ಲಕ್ಷ್ಮಣ, ಅಯೋಧ್ಯೆಯನ್ನು ಮರೆತು ಲಂಕೆಯಲ್ಲೇ ಇರುವ ಇಚ್ಛೆ ವ್ಯಕ್ತಪಡಿಸಿದಾಗ

**"ಅಪೀ ಸ್ವರ್ಣಮಯೀಲಂಕಾ। ನಮೇ ಲಕ್ಷ್ಮಣರೋಚತೆ'**
**ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ॥**

ಲಕ್ಷ್ಮಣಾ, ಇಡೀ ಲಂಕೆಯು ಚಿನ್ನದಿಂದ ಕೂಡಿದ್ದರೂ ನನಗದು ರುಚಿಸುವುದಿಲ್ಲ. ಏಕೆಂದರೆ ತಾಯಿ ಮತ್ತು ತಾಯ್ನಾಡು ನನಗೆ ಸ್ವರ್ಗಕ್ಕಿಂತಲೂ ಮಿಗಿಲು ಎಂದು ರಾಮನ ಬಾಯಲ್ಲಿ ವಾಲ್ಮೀಕಿ ಹೇಳಿಸುವ ಮಾತು ನಮಗೆಲ್ಲರಿಗೂ ಜೀವನಾದರ್ಶವಾಗಬೇಕು.



**ಎಚ್. ನಾಗಭೂಷಣರಾವ್**
**ಪೋಷಕರು, ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ (ರಿ.)**

# ವಿದ್ಯಾರ್ಥಿ ಮಿತ್ರ – 6

ಮಕ್ಕಳ ಮಂಟಪ


**1. ರಸಪ್ರಶ್ನೆ**

ಕಾವೇರಿ ನದಿಯು ತಲಕಾವೇರಿ (ಕೊಡಗು)ಯಲ್ಲಿ ಹುಟ್ಟುತ್ತದೆ. ಅದರಂತೆಯೇ ಈ ಕೆಳಗಿನ ನದಿಗಳು ಹುಟ್ಟುವ ಸ್ಥಳ ಯಾವುದು ಎಂದು ಹೇಳಬಲ್ಲಿರಾ ?

ಅ) ಶರಾವತಿ ಆ) ಮಲಪ್ರಭ ಇ) ಕಾಳಿ


ಈ) ತುಂಗಾ ಉ) ದಕ್ಷಿಣಾ ಪಿನಾಕಿನಿ

**2. ಈ ಭವನಗಳನ್ನು ಹೆಸರಿಸಬಲ್ಲಿರಾ ?**










**3. ಈ ಒಗಟುಗಳನ್ನು ಬಿಡಿಸಬಲ್ಲಿರಾ ?**

1. ಕತ್ತಲ ಮನೆಯಲ್ಲಿ ಕಳ್ಳ ಕತ್ತಿ ಬೀಸ್ತಾನೆ.
2. ಕೊಟ್ಟಿದ್ದನ್ನು ಅಗೀತದೆ, ಸಿಟ್ಟು ಬಂದು ಉಗೀತದೆ.
3. ಕುಡಿಕೆಯಲ್ಲಿ ಮೆಣಸು
4. ಅಂಗೈಯಲ್ಲಿ ತೋರಿದರೆ ಮುಂಗೈ ನುಂಗುತ್ತೆ.
5. ಬಾವೀಲಿ ಬಟ್ಟಲಿದೆ.

**4. ಪದಬಂಧ**

ಇದರಲ್ಲಿರುವ ಭಾರತರತ್ನರನ್ನು ಪತ್ತೆ ಹಚ್ಚಿ

| | | | | | | | |
|---|---|---|---|---|---|---|---|
| ತ | ರಾ | ಧಾ | ಕೃ | ಷ್ಣ | ನ್ | ಚ | ಪ |
| ಗೋ | ವಿಂ | ದ | ವ | ಲ್ಲ | ಭ | ಪಂ | ತ್ |
| ಕಾ | ಸು | ಬಿ | ಡಿ | ಅಂ | ಬೇ | ಡ್ಕ | ರ್ |
| ʼಮ | ಬ್ಬು | ಸಿ | ಕೆ | ರಾ | ಸ | ಎ | ವಿ |
| ರಾ | ಲ | ರಾ | ಕಾ | ಮ | ಕ | ನೋ | ಶ್ವೇ |
| ಜ್ | ಕ್ಷ್ಮಿ | ಯ್ | ರ್ವೆ | ನ್ | ಲ | ಭಾ | ಶ್ವ |
| ಮ | ದ | ರ್ | ತೆ | ರೇ | ಸಾ | ಬಾ | ರ |
| ಜಾ | ಕೀ | ರ್ | ಹು | ಸೇ | ನ್ | ವೆ | ಯ್ಯ |

### ವಿದ್ಯಾರ್ಥಿ ಮಿತ್ರ – 5 ರ ಉತ್ತರ

**1. ರಸಪ್ರಶ್ನೆ** : ಅ) ಬಂಗಾಳಿ ; ಆ) ತಮಿಳು ; ಇ) ಅಸ್ಸಾಮಿ ; ಈ) ತೆಲುಗು ; ಉ) ಪಂಜಾಬಿ

**2. ರಾಜ್ಯಗಳು ?** 1) ರಾಜಸ್ಥಾನ ; 2) ಬಿಹಾರ ; 3) ಕೇರಳ ; 4) ಜಮ್ಮು–ಕಾಶ್ಮೀರ

**3. ಈ ಒಗಟುಗಳು ?** 1. ನಿಂಬೆಹಣ್ಣು ; 2. ಬಾಳೆಗೊನೆ ; 3. ಗುಡುಗು ; 4. ಎರೆಹುಳು ; 5. ಬೆಣ್ಣೆ

**4. ಪದಬಂಧ :** ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಉಡುಪಿ, ಮಂಡ್ಯ, ಚಾಮರಾಜನಗರ, ಬಿಜಾಪುರ, ಧಾರವಾಡ, ಗದಗ, ರಾಯಚೂರು, ಕೊಪ್ಪಳ

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕ್ಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು



# ‘ಅಹಿಂಸಾ ಪರಮೋ ಧರ್ಮ:’

‘ ಅಹಿಂಸೆಯೇ ಶ್ರೇಷ್ಠವಾದ ಆಚರಣೆ’ ಎಂಬುದು ಸರಳ, ಸುಂದರ ತತ್ವ. ಈ ತತ್ವವನ್ನು ಜನರಿಗೆ ನೀಡಿದ್ದು ‘ಜೈನ ಧರ್ಮ’. ಕ್ರಿ.ಪೂ. 500 ರ ಸುಮಾರಿನಲ್ಲಿ ಭಾರತದಲ್ಲಿ ಎರಡು ಧರ್ಮಗಳು ಪ್ರವರ್ಧಮಾನದಲ್ಲಿದ್ದವು. ಅದೇ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು. ಸಿದ್ಧಾರ್ಥ ಹಾಗೂ ಮಹಾವೀರರು ಕ್ರಮವಾಗಿ ಈ ಧರ್ಮಗಳ ಸಂಸ್ಥಾಪಕರು. ಮಹಾವೀರರ ಜಯಂತಿಯ ಸಂದರ್ಭದಲ್ಲಿ ಅವರ ವಿಚಾರಗಳನ್ನು ಮನನ ಮಾಡುವುದು ಸೂಕ್ತ.

ಮಹಾವೀರರು ಈಗಿನ ಬಿಹಾರದ ಕುಂದ ಗ್ರಾಮದಲ್ಲಿ ಜನಿಸಿದವರು. ಇವರ ಜೀವಿತ ಕಾಲ ಸುಮಾರು ಕ್ರಿ.ಪೂ. 540 ರಿಂದ 480. ಮಹಾವೀರರು ಸುಖ–ದು:ಖಗಳೆರಡನ್ನೂ ಜಯಿಸಿದ್ದವರಾದ್ದರಿಂದ ‘ಜಿನ’ ಎಂದು ಗೌರವಿಸಲ್ಪಟ್ಟರು. ಮಹಾವೀರರು 24ನೆಯ ತೀರ್ಥಂಕರರೂ ಹೌದು. ಇವರು ತ್ಯಾಗ ಮೂಲವಾದ ಪರಂಪರಾಗತ ಸಂಪ್ರದಾಯವೊಂದಕ್ಕೆ ಸುಂದರ,ಸುಸ್ಪಷ್ಟ ರೂಪ ನೀಡಿದರು. ಅದೇ ಜೈನ ಧರ್ಮ. ಮಹಾವೀರರು ತಮ್ಮ ಜೀವನದ ಪ್ರಥಮ ಭಾಗವನ್ನು ಅತ್ಯಂತ ಕಠೋರ ತಪಸ್ಸಿನಲ್ಲಿ ಕಳೆದರು. ಕಡೆಯ ಮುವತ್ತು ವರ್ಷಗಳನ್ನು ಜೀವಿಗಳ ಉದ್ಧಾರಕ್ಕಾಗಿ ಮುಡುಪಾಗಿಟ್ಟರು.

ಜಗತ್ತಿನ ಬಗ್ಗೆ ಸರಿಯಾದ, ಸುಸ್ಪಷ್ಟವಾದ ಕಲ್ಪನೆ ಇರಬೇಕು ಎಂದು ಜೈನ ಧರ್ಮ ತಿಳಿಸುತ್ತದೆ. ಇದಕ್ಕೆ ಸಮ್ಯಗ್ದರ್ಶನ ಎಂದು ಹೆಸರು. ಸಮ್ಯಗ್ದರ್ಶನದಿಂದ ಈ ಜಗತ್ತು ಭೋಗ ಭೂಮಿಯಲ್ಲ, ಮಹಾ ದುಃಖದಾಯಕ ಎಂಬ ತಿಳುವಳಿಕೆ ಬರುತ್ತದೆ. ಜಗತ್ತಿನ ಈ ಯಥಾರ್ಥ ಸ್ಥಿತಿ ಅರಿವಾದ ಮೇಲೆ ನರಕ ಪ್ರಾಯವಾದ ಈ ಜಗತ್ತಿನ ಮೇಲೆ ಆಸಕ್ತಿ ಕಡಿಮೆಯಾಗುತ್ತದೆ. ಆದರೆ ಒಳಗಿರುವ ಕರ್ಮಗಳು ಮತ್ತೆ ಮತ್ತೆ ಆಸಕ್ತಿ ಹುಟ್ಟಿಸುತ್ತವೆ. ಹಾಗಾಗಿ ಎಂಟು ವ್ರತಗಳನ್ನು ಅಭ್ಯಾಸ ಮಾಡಲು ಮಹಾವೀರರು ಹೇಳಿದ್ದಾರೆ. ಅವೇ ‘ಅಷ್ಟ ಸೋಪಾನಗಳು.’ ಅಂದರೆ ನಿರ್ವಾಣ (ಜನ್ಮಜನ್ಮಾಂತರಗಳ ಬಂಧನದಿಂದ ಮುಕ್ತಿ) ಪಡೆಯಲು ನೆರವಾಗುವ ಎಂಟು ಮೆಟ್ಟಿಲುಗಳು. ಅಷ್ಟ ಸೋಪಾನಗಳ ಜೊತೆಗೆ ಸತ್ಯ ಮತ್ತು ಅಹಿಂಸೆಗಳನ್ನೂ ಪಾಲಿಸಬೇಕು. ಅಷ್ಟ ಸೋಪಾನಗಳನ್ನು ಎರಡು ಭಾಗವಾಗಿ ವಿಂಗಡಿಸಿದೆ: ಅದು ಸಮಿತಿ ಮತ್ತು ಗುಪ್ತಿ. ಐದು ಸಮಿತಿಗಳು ಮತ್ತು ಮೂರು ಗುಪ್ತಿಗಳಿವೆ.

ಮೂರು ಗುಪ್ತಿಗಳೆಂದರೆ: 1. ವಾಗ್ ಗುಪ್ತಿ (ಮಾತಿನ ಸಂಯಮ). 2. ಮನೋ ಗುಪ್ತಿ (ಮನಸ್ಸಿನ ಸಂಯಮ). ಹಾಗೂ 3. ಕ್ರಿಯಾ ಗುಪ್ತಿ (ಕರ್ಮೇಂದ್ರಿಯಗಳ ಸಂಯಮ).


ಐದು ಸಮಿತಿಗಳು: 1. ಭಾಷಾ ಸಮಿತಿ(ಯೋಚಿಸಿ ಎಚ್ಚರಿಕೆಯ ಹಿತ ಮಾತುಗಳನ್ನಾಡುವುದು). 2. ಏಷಣಾ ಸಮಿತಿ(ಆಸೆಗಳನ್ನು ನಿಯಂತ್ರಿಸುವುದು). 3. ಆದಾನ ಸಮಿತಿ( ಆಹಾರದಲ್ಲಿ ಹಿತ, ಮಿತ ಮತ್ತು ಪರಿಶುದ್ಧಿ). 4. ಈರ್ಯಾ ಸಮಿತಿ( ವಿಹಾರಾದಿಗಳಲ್ಲಿ ಸಾವಧಾನತೆ ಪಾಲಿಸುವುದು). 5. ವ್ಯುತ್ಸರ್ಗ ಸಮಿತಿ(ಪರಿಶುದ್ಧಿಯ ಸಮಯದಲ್ಲಿ ಎಚ್ಚರ ವಹಿಸುವುದು).

ಈ ಎಂಟು ನಿಯಮಗಳನ್ನು ನಿಷ್ಠೆಯಿಂದ ಪರಿಪಾಲಿಸಿದರೆ ಆತ್ಮಸಂಯಮ ಬರುತ್ತದೆ; ಆಸೆಗಳು ದೂರವಾಗುತ್ತವೆ; ಜೀವ ಶುದ್ಧವಾಗುತ್ತದೆ. ಈ ನಿಯಮಗಳು ಸರಳ ಎಂದು ಜೈನ ಧರ್ಮ ಹೇಳಿದರೂ ಸಾಧಾರಣ ಗೃಹಸ್ಥರು ಕಟ್ಟುನಿಟ್ಟಾಗಿ ಪಾಲಿಸಲು ಸಾಧ್ಯವಾಗಲಾರದು. ಆದ್ದರಿಂದ ಗೃಹಸ್ಥರಿಗೆ ಅಣುವ್ರತಗಳನ್ನು ಪಾಲಿಸಲು ಜೈನಧರ್ಮ ಹೇಳುತ್ತದೆ.

ಜ್ಞಾನವನ್ನು ಐದು ಪ್ರಕಾರಗಳಲ್ಲಿ ಗಳಿಸಲು ಸಾಧ್ಯ ಎಂಬುದು ಜೈನಧರ್ಮದ ಪ್ರತಿಪಾದನೆ. ಅವು : 1. ಮತಿ ಜ್ಞಾನ(ಸಾಧಾರಣ ಜ್ಞಾನ). 2. ಶ್ರುತಿ ಜ್ಞಾನ(ಜಿನರು ಮತ್ತು ಗ್ರಂಥಗಳಿಂದ ಬರುವ ಜ್ಞಾನ). 3. ಅವಧಿ ಜ್ಞಾನ(ಪ್ರಾಪಂಚಿಕ ಅನುಭವಗಳಿಂದ ಬರುವ ಜ್ಞಾನ). 4. ಮನ: ಪರ್ಯಾಯ( ಅತಿ ಲೌಕಿಕ ಜ್ಞಾನ). ಮತ್ತು 5. ಕೇವಲ ಜ್ಞಾನ(ಮುಕ್ತಿಗೆ ಮಾರ್ಗದರ್ಶಕ). ಕೇವಲ ಜ್ಞಾನದಿಂದ ಮುಕ್ತಿ. ಈ ಬಗೆಯಲ್ಲಿ ಮುಕ್ತನಾದವನು ‘ಜಿನ’.

ಜೈನಧರ್ಮದಲ್ಲಿ ಎರಡು ವರ್ಗ. ಶ್ವೇತಾಂಬರರು ಮತ್ತು ದಿಗಂಬರರು. ಶ್ವೇತಾಂಬರರು ಜಿನ ಮಹಾವೀರರ ಮೂರ್ತಿಗಳನ್ನು ಪೂಜಿಸುತ್ತಾರೆ.ದಿಗಂಬರರು ದಿಗ್ ವಸನಧಾರಿಗಳು; ಧ್ಯಾನಮಗ್ನರು; ಆಕಾಶದಂತೆ ಮುಕ್ತರು. ಅವರು ಮಂದಿರ ಮತ್ತು ಗ್ರಂಥಗಳಿಗೆ ಪ್ರಾಧಾನ್ಯತೆ ನೀಡುವುದಿಲ್ಲ.

ಕಾಲಕ್ರಮೇಣ ಜೈನಧರ್ಮದ ಪ್ರಾಬಲ್ಯತೆ ನಶಿಸಿ ಹೋಯಿತಾದರೂ ಈಗಲೂ ಜೈನಧರ್ಮದ ಅನುಯಾಯಿಗಳನ್ನು ಕಾಣಬಹುದು. ಜೈನ ಬಸದಿಗಳ ನಿರ್ಮಲ, ಪ್ರಶಾಂತ ವಾತಾವರಣ ಮನಸ್ಸಿಗೆ ಮುದ ನೀಡುತ್ತದೆ.ಮಹಾವೀರ ಜಯಂತಿಯ ಶುಭ ಸಂದರ್ಭದಲ್ಲಿ ಜೈನಧರ್ಮದ ಮನನ ಮಾಡುವುದು ಸಂತೋಷದಾಯಕವಲ್ಲವೇ?



(ಆಧಾರ: ವಿವೇಕ ಪ್ರಭ ಏಪ್ರಿಲ್ 2012 ರ ಸಂಚಿಕೆ)

‘ಶ್ವೇತಾದ್ರಿ’

# ಪ್ರಯತ್ನಕ್ಕೆ ಖಂಡಿತಾ ಫಲವಿದೆ

ಬಾಂಗ್ಲಾದೇಶದ ಜೋಯನಲ್ ಅಬೇದಿನ್ ಕುಗ್ರಾಮದ ನಿವಾಸಿ ಕಡುಬಡವ. ತಂದೆಗೆ ಕಾಯಿಲೆಯಾದಾಗ ಎತ್ತಿನ ಗಾಡಿಯಲ್ಲಿ 20 ಕಿ.ಮೀ. ದೂರದ ಪಟ್ಟಣಕ್ಕೆ ಒಯ್ಯುವಾಗ ತಂದೆ ತೀರಿಕೊಂಡಿದ್ದ. ನಂತರ ಆತ ಅಲ್ಲಿಂದ 60 ಕಿ.ಮೀ ದೂರದ ಢಾಕಾಗೆ ಹೋದ, ಅಲ್ಲಿ ಸೈಕಲ್ ರಿಕ್ಷಾ ಬಾಡಿಗೆ ಓಡಿಸತೊಡಗಿದ. ಸ್ವಲ್ಪ ಹಣ ಸೇರಿದ ಮೇಲೆ ರಿಕ್ಷಾ ಕೊಂಡುಕೊಂಡ. ಅದನ್ನು ಬಳಸಿದ ಮೊದಲ ದಿನವೇ ಬ್ಯಾಂಕ್ ಅಕೌಂಟ್ ತೆರೆದ. ಅದಕ್ಕೆ ಸ್ವಲ್ಪ ಸ್ವಲ್ಪ ಹಣ ಜಮೆ ಮಾಡುತ್ತಿದ್ದ. ಹೆಂಡತಿಗೂ ತಿಳಿಸಲಿಲ್ಲ. ಹೆಂಡತಿಯ ಹೆಸರಿನಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಉಳಿಸುತ್ತಿದ್ದ. ಹೀಗೆ ಹದಿನೈದು ವರ್ಷಗಳು ಕಳೆದವು ಉಪವಾಸದ ಪರಿಸ್ಥಿತಿಯಲ್ಲೂ ತನ್ನ ಖಾತೆಯ ಹಣವನ್ನು ಬಳಸಲಿಲ್ಲ.

ಕೊನೆಗೊಂದು ದಿನ ಹೆಂಡತಿಗೆ ಹೇಳಿದ – 'ನಮ್ಮ ಹಳ್ಳಿಯಲ್ಲಿ ಆಸ್ಪತ್ರೆ ಇರದಿದ್ದುದರಿಂದ ನನ್ನ ತಂದೆ ತೀರಿಕೊಂಡರು. ಇನ್ನೂ ಎಷ್ಟೋ ಮಂದಿಗೆ ಹಾಗಾಗಬಾರದು. ಅಂತವರ ಪ್ರಯೋಜನಕ್ಕೆ ನಮ್ಮ ಹಣವನ್ನು ವೆಚ್ಚಮಾಡೋಣ' ಎಂದ. ಕೈಯಲ್ಲಿ ನಾಲ್ಕು ಲಕ್ಷ ರೂಪಾಯಿಗಳೊಂದಿಗೆ ಪೇಟೆ ಬಿಟ್ಟು ಹಳ್ಳಿಗೆ ಬಂದುದಕ್ಕಾಗಿ ಎಲ್ಲರೂ ಅಪಹಾಸ್ಯ ಮಾಡಿದರು.

ಸ್ವಂತ ಹಣದಲ್ಲಿ ಜಾಗಕೊಂಡು ಶೆಡ್ ಹಾಕಿಸಿದ. ಅಂತೂ ಕ್ಲಿನಿಕ್ ಶುರುವಾಯಿತು. ಮೊದಲದಿನ 25 ರೋಗಿಗಳು ಬಂದರು. ತೀವ್ರ ಕಾಯಿಲೆಯವರಿಗೆ ಪ್ರಥಮ ಚಿಕಿತ್ಸೆ ನೀಡಿ ಪಟ್ಟಣಕ್ಕೆ ಕಳುಹಿದರೆ ಸಣ್ಣಪುಟ್ಟದಕ್ಕೆ ಅಲ್ಲಿಯೇ ಉಚಿತ ಚಿಕಿತ್ಸೆ. ಆತನ ನಿಃಸ್ವಾರ್ಥ ಸೇವೆಗೆ ಸ್ಪಂದಿಸಿ ಹೆಚ್ಚು ಜನ ದೇಣಿಗೆ ಕೊಡಲಾರಂಭಿಸಿದರು.

ಈಗ ಪ್ರತಿದಿನ ಆತನ ಆಸ್ಪತ್ರೆಗೆ 250 ರೋಗಿಗಳು ಬರುತ್ತಿದ್ದಾರೆ. ಆಸ್ಪತ್ರೆಯ ಪಕ್ಕದಲ್ಲೇ ಹಳ್ಳಿಯ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯನ್ನೂ ತೆರೆದ. ಈಗ ಅಲ್ಲಿ 150 ಮಕ್ಕಳು ಓದುತ್ತಿದ್ದಾರೆ, ಸಾಮಾನ್ಯ ರಿಕ್ಷಾ ಚಾಲಕನಾದ ಆತನ ಕೆಲಸಕ್ಕೆ ದೇಶ ವಿದೇಶಗಳ ಪ್ರಶಸ್ತಿಗಳು ಒಲಿದು ಬಂದಿವೆ.

ಪ್ರಯತ್ನ ಮತ್ತು ಒಳ್ಳೆಯ ಸಂಕಲ್ಪಕ್ಕೆ ಖಂಡಿತಾ ಫಲ ದೊರೆಯುವುದು.

ಕೃಪೆ : ಸಂಸ್ಕಾರ ಸಿಂಧು

Registered. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

APRIL 2014
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com